ಕರ್ನಾಟಕ ಸರ್ಕಾರ
(ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ)
ಉಪ ನಿರ್ದೇಶಕರವರ ಕಛೇರಿ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಬೀದರ.
ಮೈಲೂರ ರಸ್ತೆ, ಬೀದರ, ☎: 08482-233146, 08482-234237
Email: adwcdbidar@gmail.com

ಸಂಖ್ಯೆ:ಉನಿಬಿ:ಮಮಅಇ:ಅಂಕಾಸ:ನೇಮಕ:2017-18 ದಿನಾಂಕ:09-11-2017

# ಅಧಿಸೂಚನೆ

ಬೀದರ ಜಿಲ್ಲೆಯ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯಡಿ ಕಾರ್ಯನಿರ್ವಹಿಸುತ್ತಿರುವ 05 ಶಿಶು ಅಭಿವೃದ್ಧಿ ಯೋಜನೆಗಳ ವ್ಯಾಪ್ತಿಯಲ್ಲಿ ಬರುವ ಅಂಗನವಾಡಿ ಕೇಂದ್ರಗಳಲ್ಲಿ ಖಾಲಿ ಇರುವ 90 ಅಂಗನವಾಡಿ ಕಾರ್ಯಕರ್ತೆ ಮತ್ತು 261 ಅಂಗನವಾಡಿ ಸಹಾಯಕಿಯರ ಗೌರವ ಸೇವೆಯ ಹುದ್ದೆಗಳಿಗೆ ನೇಮಕ ಮಾಡಲು ಅರ್ಹ ಮಹಿಳಾ ಅಭ್ಯರ್ಥಿಗಳಿಂದ ಆನ್‌ಲೈನ್ ಮೂಲಕ ಅರ್ಜಿಗಳನ್ನು ಆಹ್ವಾನಿಸಿದೆ. ಮಹಿಳಾ ಅಭ್ಯರ್ಥಿಗಳು ಆನ್ ಲೈನ್ ಮೂಲಕ ಮಾತ್ರ ಅರ್ಜಿಗಳನ್ನು ಸಲ್ಲಿಸಲು ಕೋರಿದೆ. ಈ ಸಂಬಂಧ ಹೆಚ್ಚಿನ ವಿವರಗಳಿಗೆ ಸಂಬಂಧಪಟ್ಟ ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳನ್ನು ಕಚೇರಿಯ ವೇಳೆಯಲ್ಲಿ ಸಂಪರ್ಕಿಸಲು ಕೋರಿದೆ.

| | |
|---|---|
| ಅರ್ಜಿ ಸಲ್ಲಿಸಲು ನಿಗದಿಪಡಿಸಿದ ಪಾರಂಭ ಪ್ರಾರಂಭದ ದಿನಾಂಕ: | 13.11.2017 |
| ಅರ್ಜಿ ಸಲ್ಲಿಸುವ ಕೊನೆಯ ದಿನಾಂಕ | 07.12.2017 |
| WEBSITE | www.anganwadirecruit.kar.nic.in |

ಉಪ ನಿರ್ದೇಶಕರು
ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ
ಬೀದರ

ಕರ್ನಾಟಕ ಸರ್ಕಾರ
(ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ)
ಉಪ ನಿರ್ದೇಶಕರವರ ಕಛೇರಿ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಬೀದರ.
ಮೈಲೂರ ರಸ್ತೆ, ಬೀದರ, ☎: 08482-233146, 08482-234237
Email: adwcdbidar@gmail.com

# Calendar of Events

ಅಂಗನವಾಡಿ ಕಾರ್ಯಕರ್ತೆ/ಸಹಾಯಕಿಯರ ನೇಮಕಾತಿ ಪ್ರಕ್ರಿಯೆಯನ್ನು ಆನ್‌ಲೈನ್ ಮೂಲಕ ಅರ್ಜಿ ಆಹ್ವಾನಿಸಲು ಈ ಕೆಳಕಂಡಂತೆ ಕ್ರಮವಹಿಸಲಾಗಿದೆ.

| | |
|---|---|
| WEBSITE | **www.anganwadirecruit.kar.nic.in** |

| ದಿನಾಂಕ | ದಿನ | ವಿವರ | ಷರಾ |
|---|---|---|---|
| 13-11-2017 | – | ಆನ್ ಲೈನ್ ಅರ್ಜಿ ಸಲ್ಲಿಸಲು ಪ್ರಾರಂಭದ ದಿನಾಂಕ | |
| 07-12-2017 | 25 | ಆನ್ ಲೈನ್ ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ | |
| 11-12-2017 | 4 | ಆಯ್ಕೆ ಸಮಿತಿ ಸದಸ್ಯರು ಹಾಗೂ ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳಿಂದ ಸ್ವೀಕರಿಸಲಾದ ಅರ್ಜಿಗಳನ್ನು .ಎನ್.ಐ.ಸಿ.ಯಲ್ಲಿ ಪರಿಶೀಲನೆ | |
| 14-12-2017 | 3 | ಅರ್ಹರಾದ ಅಭ್ಯರ್ಥಿಗಳ ಪಟ್ಟಿಯನ್ನು ಆಯ್ಕೆ ಸಮಿತಿಯಿಂದ ಅನುಮೋದನೆ ಪಡೆಯುವುದು. | |
| 21-12-2017 | 7 | ಅಭ್ಯರ್ಥಿಗಳಿಂದ ಆಕ್ಷೇಪಣೆ ಸಲ್ಲಿಸುವಿಕೆಗೆ ಕಾಲಾವಕಾಶ | |
| 26-12-2017 | 3 (ಕೆಲಸದ ದಿವಸಗಳು) | ಆಕ್ಷೇಪಣೆ ಬಂದ ಅಭ್ಯರ್ಥಿಗಳ ದಾಖಲಾತಿ ಪರಿಶೀಲನೆ | |
| 28-12-2017 | 2 | ಪರಿಶೀಲನೆ ನಂತರ ಆಯ್ಕೆ ಸಮಿತಿಯ ಸಭೆ ನಡೆಸಿ ಅಂತಿಮ ಪಟ್ಟಿಗೆ ಅನುಮೋದನೆ ಪಡೆಯುವುದು | |

ಉಪ ನಿರ್ದೇಶಕರು
ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ
ಬೀದರ

ಕರ್ನಾಟಕ ಸರ್ಕಾರ
(ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ)
ಉಪ ನಿರ್ದೇಶಕರವರ ಕಛೇರಿ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಬೀದರ.
ಮೈಲೂರ ರಸ್ತೆ, ಬೀದರ, ☎: 08482-233146, 08482-234237
Email: adwcdbidar@gmail.com

ಸಂಖ್ಯೆ:ಉನಿಬಿ:ಮಮಇ:ಅಂಕಾಸ:ನೇಮಕ::2017-18 ದಿನಾಂಕ:04-11-2017

ವಿಷಯ: ಅಂಗನವಾಡಿ ಕಾರ್ಯಕರ್ತೆ/ಸಹಾಯಕಿಯರ ಹುದ್ದೆ ಭರ್ತಿ ಮಾಡಲು ಅರ್ಜಿ ಆಹ್ವಾನಿಸುವ ಬಗ್ಗೆ.

ಉಲ್ಲೇಖ: ಸರ್ಕಾರಿ ಆದೇಶ ಸಂ:ಮಮಇ/303/ಐಸಿಡಿ/2017 ಬೆಂಗಳೂರು. ದಿ:23/09/2017

******

ಬೀದರ ಜಿಲ್ಲೆಯ 05 ಶಿಶು ಅಭಿವೃದ್ಧಿ ಯೋಜನೆಗಳ ವ್ಯಾಪ್ತಿಯ ಈ ಕೆಳಗೆ ಕಾಣಿಸಲಾದ ಗ್ರಾಮಗಳ ವ್ಯಾಪ್ತಿಯ ಅಂಗನವಾಡಿ ಕೇಂದ್ರಗಳಿಗೆ ಕಾರ್ಯಕರ್ತೆ ಹಾಗೂ ಸಹಾಯಕಿಯಾಗಿ ಗೌರವಸೇವೆ ಸಲ್ಲಿಸಲು ಈ ಕೆಳಗೆ ತೋರಿಸಲಾದ ಮೀಸಲಾತಿ ಹೊಂದಿದ 18 ರಿಂದ 35 ವರ್ಷದೊಳಗಿನ ಅರ್ಹ ಸ್ಥಳೀಯ (ಅದೇ ಗ್ರಾಮದ) ಮಹಿಳಾ ಅಭ್ಯರ್ಥಿಗಳಿಂದ ಮಾತ್ರ ಈ ಕೆಳಗೆ ತೋರಿಸಲಾದ ನಮೂನೆಯಲ್ಲಿ ಅರ್ಜಿ ಆಹ್ವಾನಿಸಲಾಗಿದೆ. ಅಂಗನವಾಡಿ ಕಾರ್ಯಕರ್ತೆಯಾಗಲು ಎಸ್.ಎಸ್.ಎಲ್.ಸಿ. ತೇರ್ಗಡೆಯಾಗಿರಬೇಕು. ಅಂಗನವಾಡಿ ಸಹಾಯಕಿಯಾಗಲು ಕನಿಷ್ಠ 4ನೇ ತರಗತಿ ತೇರ್ಗಡೆಯಾಗಿದ್ದು, ಗರಿಷ್ಠ ವಿದ್ಯಾರ್ಹತೆ 9ನೇ ತರಗತಿ ತೇರ್ಗಡೆ. ಈ ಕೆಳಗೆ ತೋರಿಸಲಾದ ಎಲ್ಲಾ ದಾಖಲೆಗಳೊಂದಿಗೆ ಸಂಬಂಧಿತರು ಭರ್ತಿಮಾಡಿದ ಅರ್ಜಿಗಳನ್ನು ದಿನಾಂಕ: 04-12-2017 ರ ಅಪರಾಹ್ನ 5.30 ಗಂಟೆಯೊಳಗೆ ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಲು ಸೂಚಿಸಿದೆ.

**<u>ಅರ್ಜಿಯೊಂದಿಗೆ ಲಗತ್ತಿಸಬೇಕಾದ ದಾಖಲಾತಿಗಳು:</u>**

1. ಮಾಹಿತಿಯನ್ನು ಭರ್ತಿ ಮಾಡಿದ ಅರ್ಜಿ (ಆನ್‌ಲೈನ್)
2. ಜನನ ಪ್ರಮಾಣ ಪತ್ರ/ಜನ್ಮದಿನಾಂಕ ಇರುವ ಎಸ್.ಎಸ್.ಎಲ್.ಸಿ. ಅಂಕಪಟ್ಟಿ
3. ತಹಶೀಲ್ದಾರರು/ಉಪತಹಶೀಲ್ದಾರರಿಂದ ಪಡೆದ 1 ವರ್ಷದೊಳಗಿನ ವಾಸಸ್ಥಳ ದೃಢೀಕರಣ ಪತ್ರ
4. ವಿದ್ಯಾರ್ಹತೆ ಬಗ್ಗೆ ಪ್ರಮಾಣ ಪತ್ರ (ಕಾರ್ಯಕರ್ತೆ ಹುದ್ದೆಗೆ ಎಸ್.ಎಸ್.ಎಲ್.ಸಿ.ಗಿಂತ ಹೆಚ್ಚಿನ ವಿದ್ಯಾರ್ಹತೆ ಹೊಂದಿರುವವರು ಎಸ್.ಎಸ್.ಎಲ್.ಸಿ. ತೇರ್ಗಡೆ ಹೊಂದಿದ ಅಂಕಪಟ್ಟಿಯನ್ನು ಲಗತ್ತಿಸುವುದು.)

5. ವಿದ್ಯಾರ್ಹತೆ ಬಗ್ಗೆ ಪ್ರಮಾಣ ಪತ್ರ (ಸಹಾಯಕಿ ಹುದ್ದೆಗೆ 9ನೇ ತರಗತಿಗತಿಗಿಂತ ಹೆಚ್ಚಿನ ವಿದ್ಯಾರ್ಹತೆ ಹೊಂದಿರುವವರು 9ನೇ ತರಗತಿಯ ಅಂಕಪಟ್ಟಿಯನ್ನು. ಲಗತ್ತಿಸುವುದು)
6. ಮೀಸಲಾತಿ ಅಭ್ಯರ್ಥಿಗಳ ಜಾತಿ ಪ್ರಮಾಣ ಪತ್ರ,
7. ಪತಿಯ ಮರಣ ಪ್ರಮಾಣ ಪತ್ರ (ವಿಧವಾ ವೇತನದ ದೃಢೀಕರಣವನ್ನು ಪರಿಗಣಿಸುವುದಿಲ್ಲ)
8. ಆತಹತ್ಯೆ ಮಾಡಿಕೊಂಡ ರೈತರ ಪತ್ನಿ ಎಂದು ಉಪವಿಭಾಗಾಧಿಕಾರಿಗಳಿಂದ ಪಡೆದ ಪ್ರಮಾಣ ಪತ್ರ,
9. ಅಂಗವಿಕಲತೆ ಪ್ರಮಾಣ ಪತ್ರ (ದೈಹಿಕ ಅಂಗವಿಕಲತೆ ಶೇ. 60 ಕ್ಕಿಂತ ಕಡಿಮೆ ಇದ್ದಲ್ಲಿ ಮಾತ್ರ) (ಅಂಗನವಾಡಿ ಕಾರ್ಯಕರ್ತೆ ಹುದ್ದೆಗೆ ಅರ್ಜಿ ಸಲ್ಲಿಸುವವರಿಗೆ ಮಾತ್ರ) (ಅಂಗವಿಕಲ ವೇತನದ ದೃಢೀಕರಣವನ್ನು ಪರಿಗಣಿಸುವುದಿಲ್ಲ)
10. ವಿಚ್ಛೇದನ ಪ್ರಮಾಣ ಪತ್ರ (ನ್ಯಾಯಾಲಯದಿಂದ ಪಡೆದಿರಬೇಕು)
11. ಕರ್ನಾಟಕ ರಾಜ್ಯ ಮಹಿಳಾ ಅಭಿವೃದ್ಧಿ ನಿಗಮದ ವತಿಯಿಂದ ನಡೆಸಲ್ಪಟ್ಟ ಮಾಜಿ ದೇವದಾಸಿಯರ ಸಮೀಕ್ಷೆಯ ಪಟ್ಟಿಯಲ್ಲಿರುವ ಮಾಜಿ ದೇವದಾಸಿಯರ ಮಕ್ಕಳು ಎಂಬುದರ ಬಗ್ಗೆ ಮಹಿಳಾ ಅಭಿವೃದ್ಧಿ ನಿಗಮದ ಅಧಿಕಾರಿಗಳಿಂದ ಪಡೆದ ಪ್ರಮಾಣ ಪತ್ರ,
12. ಪರಿತ್ಯಕ್ತೆ ಎಂಬ ಬಗ್ಗೆ ಗ್ರಾಮ ಪಂಚಾಯತ್‌ನಿಂದ ಪಡೆದ ಪ್ರಮಾಣ ಪತ್ರ,
13. ಇಲಾಖೆಯ ಸುಧಾರಣಾ ಸಂಸ್ಥೆ/ರಾಜ್ಯ ಮಹಿಳಾ ನಿಲಯಗಳ ನಿವಾಸಿ ಎಂಬ ಬಗ್ಗೆ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಅಧಿಕಾರಿಗಳಿಂದ ಪಡೆದ ಪ್ರಮಾಣ ಪತ್ರ
14. ಯೋಜನಾ ನಿರಾಶ್ರಿತರೆಂಬ ಬಗ್ಗೆ ತಹಶೀಲ್ದಾರರಿಂದ ಪಡೆದ ಪ್ರಮಾಣ ಪತ್ರ,
15. ಸ್ಥಳೀಯ ಸಂಸ್ಥೆಗಳ ಜನಪ್ರತಿನಿಧಿ ಆಗಿದ್ದಲ್ಲಿ, ಕಾರ್ಯಕರ್ತೆ/ ಸಹಾಯಕಿ ಹುದ್ದೆಗೆ ಆಯ್ಕೆಯಾದಲ್ಲಿ ಸದಸ್ಯತ್ವಕ್ಕೆ ರಾಜಿನಾಮೆ ನೀಡಬೇಕಿರುತ್ತದೆ.

**ಉಪನಿರ್ದೇಶಕರು**
**ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ**
**ಬೀದರ**

| Sl. No | ICDS Project | District |
|---|---|---|
| 1 | Bidar | BIDAR |
| 2 | Basavakalyan | BIDAR |
| 3 | Humnabad | BIDAR |
| 4 | Santhpur/Aurad | BIDAR |
| 5 | Bhalki | BIDAR |

Deputy Director
Women & Child Development
BIDAR

# Bidar District Anganwadi Workers Vacancy Information list. 2017-18

| Sl.No | Anganwadi Centre Name | Grama Panchayath / Ward no. | Reserved for ( SC/ST/ Others) | Name of Taluka / ICDS Project |
|---|---|---|---|---|
| 1 | Baridabad-01 | Chatnalli | S.T | Bidar |
| 2 | Sirsi(A)-01 | Sirsi | S.C | Bidar |
| 3 | Bapur | Markunda | Others | Bidar |
| 4 | Andurwadi-01 | Andur | Others | Bidar |
| 5 | Nizampur-01 | Kolar(k) | S.C | Bidar |
| 6 | Hokrana(B)-03 | Hokrana(B) | S.T | Bidar |
| 7 | Baroor-04 | Baroor | S.T | Bidar |
| 8 | Satolli-02 | Nagura | Others | Bidar |
| 9 | Satolli-03 | Nagura | S.C | Bidar |
| 10 | Kamtana-04 | Kamtana | Others | Bidar |
| 11 | Gunalli-01 | Chitta | S.C | Bidar |
| 12 | Chilargi-04 | Chilrgi | Others | Bidar |
| 13 | Kaplapur(J)-01 | Malegoan | S.C | Bidar |
| 14 | Jampad-02 | Chilrgi | Others | Bidar |
| 15 | Harurgeri-02 | Bidar City | S.C | Bidar |
| 16 | Sheku Tanda | Chikknagaon | S.C | Basavakalyan |
| 17 | Kherda(B)-B | Kherda(B) | S.C | Basavakalyan |
| 18 | Bag Hipparga | Kalkhora | S.C | Basavakalyan |
| 19 | Gadlegoan(B)-A | Harkud | S.C | Basavakalyan |
| 20 | Yarbag-A | Yarbaga | Others | Basavakalyan |
| 21 | Sastapur-A | Sastapur | Others | Basavakalyan |
| 22 | Ghotala-D | Ghotala | Others | Basavakalyan |
| 23 | Kongewadi | Morkhandi | Others | Basavakalyan |
| 24 | Neelkantwadi | Pratapur | S.T | Basavakalyan |
| 25 | Toglur-A | Toglur | Others | Basavakalyan |
| 26 | Narayanpur tanda | Narayanpur | S.C | Basavakalyan |
| 27 | Chandkapur-B | Chandapur | S.C | Basavakalyan |
| 28 | Handral-R | Algud | Others | Basavakalyan |
| 29 | Rajola-A | Rajola | Others | Basavakalyan |
| 30 | Rajola Tanda | Rajola | S.C | Basavakalyan |
| 31 | Hankuni-66 | Hankuni | S.C | Humnabad |
| 32 | Othgi-165 | Chandanhalli | Other | Humnabad |
| 33 | Kankatta-114 | Kankatta | Other | Humnabad |
| 34 | Muttangi-225 | Muttangi | Other | Humnabad |
| 35 | Meenkera-143 | Meenkera | Other | Humnabad |
| 36 | Nimboor-160 | Sitalgera | S.T | Humnabad |
| 37 | Korekal Thanda | Korekal | S.C | Santhpur/Aurad |
| 38 | Mansingh Thanda | T.Kushnoor | S.C | Santhpur/Aurad |
| 39 | Chondi mukkhed | Chikli(U) | Other | Santhpur/Aurad |
| 40 | Chimmegaon-1 | Chimmegaon | Other | Santhpur/Aurad |
| 41 | Mansingh Thanda(PP) | Aurad(B) | S.C | Santhpur/Aurad |
| 42 | Jamgi-2 | Jamgi | S.C | Santhpur/Aurad |
| 43 | Murki Wadi | Murki | S.T | Santhpur/Aurad |
| 44 | Murki-1 | Murki | Other | Santhpur/Aurad |
| 45 | Muruki (Bhavani Galli) | Murki | Other | Santhpur/Aurad |
| 46 | Rakshiyal-K | Hedgapur | S.C | Santhpur/Aurad |

| | | | | |
|---|---|---|---|---|
| 47 | Mudhol(B) Thanda | Mudhol(B) | S.C | Santhpur/Aurad |
| 48 | Kherda-(B) | Bhandarkumpta | Other | Santhpur/Aurad |
| 49 | Manoor(K) | Nagmarpalli | Other | Santhpur/Aurad |
| 50 | Dhupathmahagaon-1 | Dhupathmahagaon | Other | Santhpur/Aurad |
| 51 | Sakaram Thanda | Hokrana | S.C | Santhpur/Aurad |
| 52 | Nandi Bijalgaon Thanda | Chikli(U) | S.C | Santhpur/Aurad |
| 53 | Khatgaon-1 | Madnoor | Other | Santhpur/Aurad |
| 54 | Jeerga(K) | Dhupathmahagaon | Other | Santhpur/Aurad |
| 55 | Chandeshwar | Diggi | Other | Santhpur/Aurad |
| 56 | Chikli(U) | Chikli(U) | Other | Santhpur/Aurad |
| 57 | Alur(K) Thanda | Ladha | S.C | Santhpur/Aurad |
| 58 | Badalgaon | Badalgaon | Other | Santhpur/Aurad |
| 59 | Chirki Thanda | Chimmegaon | S.C | Santhpur/Aurad |
| 60 | Karkiyal-2 | Belkuni(B) | Other | Santhpur/Aurad |
| 61 | Shivpur | Murki | Other | Santhpur/Aurad |
| 62 | Ganeshpur-A | Ekambha | Other | Santhpur/Aurad |
| 63 | Ballur(J) | Koutha(B) | Other | Santhpur/Aurad |
| 64 | Vanmarpalli | Badalgaon | Other | Santhpur/Aurad |
| 65 | Dabka .C | Dabka C | Other | Santhpur/Aurad |
| 66 | Sorhalli | Wadgaon(D) | Other | Santhpur/Aurad |
| 67 | Sangam-1 | Khed | S.C | Santhpur/Aurad |
| 68 | Sonal (SC Ward) | Sonal | Other | Santhpur/Aurad |
| 69 | Holasamudra | Holasamudra | Other | Santhpur/Aurad |
| 70 | Basnal | Holasamudra | Other | Santhpur/Aurad |
| 71 | Eklar | Eklar | Other | Santhpur/Aurad |
| 72 | Kuntesirsi | Kurubakhelgi | Others | Bhalki |
| 73 | Dawargoan B | Dawargaon | Others | Bhalki |
| 74 | Jyanti B | Jyanti | Others | Bhalki |
| 75 | Joladapka A | Joladapakga | S.C | Bhalki |
| 76 | Kesarjawalaga A | Kesarjawalaga | S.C | Bhalki |
| 77 | Bhatmbra E | Bhatmbra | Others | Bhalki |
| 78 | Rudanor A | Malachapur | S.C | Bhalki |
| 79 | Wanjarkhed Thanda | Wanjarkhed | S.C | Bhalki |
| 80 | Alwai A | Alwai | S.C | Bhalki |
| 81 | Valasang B | Ambesangavi | Others | Bhalki |
| 82 | Kadalabad | Talwad K | Others | Bhalki |
| 83 | Methimelakunda Wadi | Mathimelkunda | S.C | Bhalki |
| 84 | Navadagi Thanda | Enkur | S.C | Bhalki |
| 85 | Ganeshpur wadi | Ambesangavi | Others | Bhalki |
| 86 | Halahipprga A | Kosam | S.C | Bhalki |
| 87 | Konmelkunda B | Konmelkunda | Others | Bhalki |
| 88 | Chandapur B | Baluru | Others | Bhalki |
| 89 | Tegmpur | Halbarga | Others | Bhalki |
| 90 | Hajanal A | Nittur B | Others | Bhalki |

**Deputy Director**
**Dept., of Women & Child Development,**
**Bidar**

| Bidar District Anganwadi Helpers Vacancy information list. 2017-18 | | | | |
|---|---|---|---|---|
| **Sl. No** | **Anganwadi Centre Name** | **Grama Panchayath / Ward no.** | **Reserved for ( SC/ST/ Others)** | **Name of Taluka/ICDS Project** |
| 1 | Chatnalli-01 | Chatnalli | Others | Bidar |
| 2 | Baridabad-02 | Chatnalli | S.T | Bidar |
| 3 | Khasempur C-02 | Aurad(S) | S.C | Bidar |
| 4 | Khasempur(P)-01 | Kadwad | S.T | Bidar |
| 5 | Khasempur(P)-03 | Kadwad | S.C | Bidar |
| 6 | Kadwad-03 | Kadwad | S.C | Bidar |
| 7 | Kamtana-11 | Kamtana | Others | Bidar |
| 8 | RanjolaKheni-02 | RanjolKheni | Others | Bidar |
| 9 | RanjolaKheni-05 | RanjolKheni | Others | Bidar |
| 10 | Hochaknalli-01 | RanjolKheni | Others | Bidar |
| 11 | Nidvancha-02 | Rekulgi | Others | Bidar |
| 12 | Nidvancha-03 | Rekulgi | Others | Bidar |
| 13 | Bapur | Markunda | Others | Bidar |
| 14 | Bhangur-02 | Markunda | Others | Bidar |
| 15 | Kolar(k)-01 | Kolar(K) | Others | Bidar |
| 16 | Hajjargi | Kolar(K) | S.C | Bidar |
| 17 | Bakchaudi-01 | Kolar(K) | Others | Bidar |
| 18 | Bakchaudi-02 | Kolar(K) | S C | Bidar |
| 19 | Sikendrapur-02 | Andur | S.T | Bidar |
| 20 | Mannalli-03 | Mannalli | Others | Bidar |
| 21 | Mannalli-08 | Mannalli | Others | Bidar |
| 22 | Hokrana(B)-K-02 | Hokrana(B) | Others | Bidar |
| 23 | Chintalgera-01 | Hokrana(B) | Others | Bidar |
| 24 | Yakatpur-01 | Nagoora | S.T | Bidar |
| 25 | Satolli-01 | Nagoora | Others | Bidar |
| 26 | Satolli-03 | Nagoora | S.C | Bidar |
| 27 | Ghodapalli-02 | Nagoora | S.T | Bidar |
| 28 | Ghodapalli-03 | Nagoora | Others | Bidar |
| 29 | Kutabad-01 | Nagoora | S.T | Bidar |
| 30 | Baroor-04 | Baroor | S.T | Bidar |
| 31 | Sindol-01 | Sindol | Others | Bidar |
| 32 | Shahapur-01 | Malkapur | S.T | Bidar |
| 33 | Sultanpur-01 | Malkapur | S.T | Bidar |
| 34 | Shamrajpur | Gadgi | Others | Bidar |
| 35 | Gadgi-05 | Gadgi | Others | Bidar |
| 36 | Chimkod-01 | Chimkod | Others | Bidar |
| 37 | Chimkod-03 | Chimkod | S.C | Bidar |
| 38 | Fhatepur-02 | Chimkod | S.T | Bidar |

| | | | | |
|---|---|---|---|---|
| 39 | Khajapur | Chimkod | Others | Bidar |
| 40 | Yarnalli-01 | Yarnalli | S.T | Bidar |
| 41 | Sangvi | Yarnalli | Others | Bidar |
| 42 | Islampur-01 | Yarnalli | Others | Bidar |
| 43 | Islampur-02 | Yarnalli | Others | Bidar |
| 44 | Rajnal-01 | Aliambar | Others | Bidar |
| 45 | Janwad-02 | Janwada | Others | Bidar |
| 46 | Janwad-03 | Janwada | S.C | Bidar |
| 47 | Hippalgoan-02 | Chambol | Others | Bidar |
| 48 | Hippalgoan-01 | Chambol | Others | Bidar |
| 49 | Mailoor-01 | Bidar City | S.C | Bidar |
| 50 | Chidri-08 | Bidar City | Others | Bidar |
| 51 | T.D.B.Colony-02 | Bidar City | Others | Bidar |
| 52 | Shahapurgate-03 | Bidar City | S C | Bidar |
| 53 | Ladgeri-02 | Bidar City | Others | Bidar |
| 54 | Harugeri-2 | Bidar City | S.C | Bidar |
| 55 | Nayakamana | Bidar City | Others | Bidar |
| 56 | Pandurang Mandir | Bidar City | Others | Bidar |
| 57 | Gorkha galli | Bidar City | Others | Bidar |
| 58 | Navadgeri-02 | Bidar City | Others | Bidar |
| 59 | Navadgeri-03 | Bidar City | Others | Bidar |
| 60 | Rajgond Colony -02 | Bidar City | S.T | Bidar |
| 61 | Bheemnagar | Bidar City | S.C | Bidar |
| 62 | Hugeri | Bidar City | Others | Bidar |
| 63 | Naubad-03 | Bidar City | Others | Bidar |
| 64 | Haque Colony | Bidar City | Others | Bidar |
| 65 | Abdul Faiz Darga | Bidar City | Others | Bidar |
| 66 | Tripurant-C | Basavakalyan city | Others | Basavakalyan |
| 67 | Shivaji Nagar | Basavakalyan city | Others | Basavakalyan |
| 68 | Vidya Shree Colony (Seeta Colony) | Basavakalyan city | Others | Basavakalyan |
| 69 | Sangmeshwar Colony | Basavakalyan city | Others | Basavakalyan |
| 70 | Kaikadegalli | Basavakalyan city | S.C | Basavakalyan |
| 71 | Anwarpet | Basavakalyan city | Others | Basavakalyan |
| 72 | Chillagalli(Auto Nagar) | Basavakalyan city | Others | Basavakalyan |
| 73 | Vitobagalli | Basavakalyan city | Others | Basavakalyan |
| 74 | Ramabai Colony | Basavakalyan city | Others | Basavakalyan |
| 75 | Yalvanthi-A | Chikknagaon | Others | Basavakalyan |
| 76 | Dhannura R-A | Kherda-B | S.C | Basavakalyan |
| 77 | Hiranagaon -B | Kherda-B | S.C | Basavakalyan |
| 78 | Bagduri-A | Mudbee | Others | Basavakalyan |
| 79 | Yarbag-B | Yarbag | S.C | Basavakalyan |

| | | | | |
|---|---|---|---|---|
| 80 | Pandargera Tanda | Yarbag | S.C | Basavakalyan |
| 81 | Islampur-C | Islampur | S.C | Basavakalyan |
| 82 | Rola | Nirgudi | Others | Basavakalyan |
| 83 | Dasarwadi-A | Nirgudi | Others | Basavakalyan |
| 84 | Kohinoor-A | Koheenoor | Others | Basavakalyan |
| 85 | Kohinoor-D | Koheenoor | Others | Basavakalyan |
| 86 | Kohinnorwadi | Koheenoor | S.T | Basavakalyan |
| 87 | Batgera-A | Batgera | Others | Basavakalyan |
| 88 | Batgera-B | Batgera | Others | Basavakalyan |
| 89 | Gaur-B | Bettbalkunda | Others | Basavakalyan |
| 90 | Devnal-A | GadiGaudgoan | Others | Basavakalyan |
| 91 | Mantal-O | Mantla | Others | Basavakalyan |
| 92 | Sastapur-A | Sastapur | Others | Basavakalyan |
| 93 | Ghotal-D | Gotal | Others | Basavakalyan |
| 94 | Bandgarwadi | Gotal | Others | Basavakalyan |
| 95 | Morkhandi-C | Morkhandi | Others | Basavakalyan |
| 96 | Pratapur-A | Pratpur | Others | Basavakalyan |
| 97 | Narayanpurwadi | Naryanpur | S.T | Basavakalyan |
| 98 | Shivpur | Naryanpur | Others | Basavakalyan |
| 99 | Gadi Gaudgaon-A | GadiGaudgoan | Others | Basavakalyan |
| 100 | Hulsoor-A | Hulsoor | Others | Basavakalyan |
| 101 | Hulsoor-G | Hulsoor | S.C | Basavakalyan |
| 102 | Bhosga-C | Bosga | Others | Basavakalyan |
| 103 | Kitta-C | Kitta | S.C | Basavakalyan |
| 104 | Gokul-B | Kitta | Others | Basavakalyan |
| 105 | Rajola-E | Rajola | Others | Basavakalyan |
| 106 | Tadola-A | Rajola | S.C | Basavakalyan |
| 107 | Hanmantwadi-R | Hanumantwadi -R | S.T | Basavakalyan |
| 108 | Reddy Galli-101 | Humnabad | Other | Humnabad |
| 109 | Shivpur Galli-263 | Humnabad | S.C | Humnabad |
| 110 | Jerpet Helvagalli-264 | Humnabad | Other | Humnabad |
| 111 | Jerpet-85 | Humnabad | Other | Humnabad |
| 112 | Christian Galli-232 | Humnabad | S.C | Humnabad |
| 113 | Waddar Galli-261 | Humnabad | Other | Humnabad |
| 114 | Gandhi Nagar-260 | Humnabad | Other | Humnabad |
| 115 | Kumbarkumti-262 | Humnabad | S.C | Humnabad |
| 116 | Syed Galli-91 | Humnabad | Other | Humnabad |
| 117 | Joshi Galli-90 | Humnabad | Other | Humnabad |
| 118 | Arya Samaj-96 | Humnabad | Other | Humnabad |
| 119 | Mustapur-148 | Hallikhed(K) | Other | Humnabad |
| 120 | Kallur-112 | Kallur | S.C | Humnabad |
| 121 | Basnthpur-08 | Maniknagar | Other | Humnabad |

| | | | | |
|---|---|---|---|---|
| 122 | Walkhandi-277 | Itga | S.T | Humnabad |
| 123 | Priyadarshini Colony-212 | Chitguppa | Other | Humnabad |
| 124 | Christian Galli-32 | Chitguppa | Other | Humnabad |
| 125 | Bhasker Nagar-269 | Chitguppa | Other | Humnabad |
| 126 | Chaudamma Gudi-270 | Chitguppa | Other | Humnabad |
| 127 | Itga-106 | Itga | Other | Humnabad |
| 128 | Baloba Galli-35 | Chitguppa | Other | Humnabad |
| 129 | Kankatta-114 | Kankatta | Other | Humnabad |
| 130 | Kankatta-301 | Kankatta | S.T | Humnabad |
| 131 | Dhummansur-51 | Dhammansur | Other | Humnabad |
| 132 | Dhummansur-52 | Dhammansur | S.C | Humnabad |
| 133 | Gadvanti-54 | Maniknagar | S.C | Humnabad |
| 134 | Gadvanti-199 | Maniknagar | Other | Humnabad |
| 135 | Gadvanti-307 | Maniknagar | SC | Humnabad |
| 136 | Maniknagar-213 | Maniknagar | Other | Humnabad |
| 137 | Jalsangi-108 | Jalsangi | S.C | Humnabad |
| 138 | Jamnagar-204 | Ghatboral | S.T | Humnabad |
| 139 | Handikera Wadi-200 | Sultanabad | Other | Humnabad |
| 140 | Sultanabad-181 | Sultanabad | S.C | Humnabad |
| 141 | Kumar Chincholi-127 | Sultanabad | Other | Humnabad |
| 142 | Othgi-166 | Chandanhalli | S.C | Humnabad |
| 143 | Manna-e-Kheli-138 | Manna-e-Kheli | Other | Humnabad |
| 144 | Manna-e-Kheli-326 | Manna-e-Kheli | Other | Humnabad |
| 145 | Manna-e-Kheli-315 | Manna-e-Kheli | Other | Humnabad |
| 146 | Manna-e-Kheli-314 | Manna-e-Kheli | Other | Humnabad |
| 147 | Mangalgi-319 | Mangalgi | Other | Humnabad |
| 148 | Shakargunjwadi-169 | Sitalgera | S.T | Humnabad |
| 149 | Madgole-131 | Belkuni | Other | Humnabad |
| 150 | Nirna-162 | Nirna | Other | Humnabad |
| 151 | Nirna-254 | Nirna | Other | Humnabad |
| 152 | Udbal-251 | Udbal | Other | Humnabad |
| 153 | Dubulgundi-49 | Dubulgundi | S.C | Humnabad |
| 154 | Dubulgundi-214 | Dubulgundi | Other | Humnabad |
| 155 | Dubulgundi-290 | Dubulgundi | Other | Humnabad |
| 156 | Dubulgundi-291 | Dubulgundi | S.C | Humnabad |
| 157 | Hallikhed(B)-67 | Hallikhed(B) | S.C | Humnabad |
| 158 | Hallikhed(B)-70 | Hallikhed(B) | Other | Humnabad |
| 159 | Atiwal-04 | Atiwal | S.C | Humnabad |
| 160 | Bemelkheda-14 | Bemalkheda | Other | Humnabad |
| 161 | Bemelkheda-320 | Bemalkheda | Other | Humnabad |
| 162 | Bemelkheda-321 | Bemalkheda | S.C | Humnabad |
| 163 | Karaknalli-120 | Karaknalli | S.C | Humnabad |

| | | | | |
|---|---|---|---|---|
| 164 | Udamnalli-186 | Udamnalli | Other | Humnabad |
| 165 | Vithalpur-188 | Bemalkheda | Other | Humnabad |
| 166 | Changlera-22 | Changlera | Other | Humnabad |
| 167 | Changlera-322 | Changlera | Other | Humnabad |
| 168 | Hudgi-239 | Hudgi | Other | Humnabad |
| 169 | Hudgi-285 | Hudgi | S.C | Humnabad |
| 170 | Benchincholi-16 | Benchincholi | S.C | Humnabad |
| 171 | Nandgaon-156 | Nandgaon | Other | Humnabad |
| 172 | Nandgaon-158 | Nandgaon | S.T | Humnabad |
| 173 | Sindhankera-175 | Sindhankera | Other | Humnabad |
| 174 | Hipperga-77 | Madargaon | Other | Humnabad |
| 175 | Shamtabad-172 | Belkera | S.T | Humnabad |
| 176 | Ganganbeed | Dabka | S.C | Santhpur/ Aurad |
| 177 | Murki Wadi | Murki | S.T | Santhpur/ Aurad |
| 178 | Bawan Matthi Thanda | Hokrana | S.C | Santhpur/ Aurad |
| 179 | Mudhol(B)-2 | Mudhol(B) | S.C | Santhpur/ Aurad |
| 180 | Savali | Holasamudra | Other | Santhpur/ Aurad |
| 181 | T.Kushnoor | T.Kushnoor | Other | Santhpur/ Aurad |
| 182 | Hippalgaon | Korekal | Other | Santhpur/ Aurad |
| 183 | Dongaon Wadi | Dongaon(M) | Other | Santhpur/ Aurad |
| 184 | Nagoor(N) | Jojna | Other | Santhpur/ Aurad |
| 185 | Mahadongaon Thanda | Korekal | S.C | Santhpur/ Aurad |
| 186 | Jamalpur | Ekambha | Other | Santhpur/ Aurad |
| 187 | Harijan Galli (Aurad-B) | Aurad(B) | S.C | Santhpur/ Aurad |
| 188 | Nandi Bijalgaon | Chikli(U) | S.C | Santhpur/ Aurad |
| 189 | Sawargaon | Bonti | Other | Santhpur/ Aurad |
| 190 | Hokrana | Hokrana | Other | Santhpur/ Aurad |
| 191 | Kalgapur | Sonal | Other | Santhpur/ Aurad |
| 192 | Khashempur | Shemballi | Other | Santhpur/ Aurad |
| 193 | Horandi-1 | Sonal | Other | Santhpur/ Aurad |
| 194 | Mudhol(K) | Torna | Other | Santhpur/ Aurad |
| 195 | Mudhol(B)-1 | Mudhol(B) | Other | Santhpur/ Aurad |
| 196 | Lakshmi Nagar | T.Kushnoor | S.C | Santhpur/ Aurad |
| 197 | Ganeshpur(U) | Dabka C | Other | Santhpur/ Aurad |
| 198 | Rakshiyal(K) | T.Kushnoor | S.C | Santhpur/ Aurad |
| 199 | Sorhalli | Wadgaon(D) | S.C | Santhpur/ Aurad |
| 200 | Chikli(J) | Chikli(J) | Other | Santhpur/ Aurad |
| 201 | Nidoda | T.Kushnoor | Other | Santhpur/ Aurad |
| 202 | Chimmegaon | Chimmegaon | Other | Santhpur/ Aurad |
| 203 | Beldal | Chintaki | Other | Santhpur/ Aurad |
| 204 | Medpalli | Gudpalli | Other | Santhpur/ Aurad |
| 205 | Karanji (K) | Nagmarpalli | Other | Santhpur/ Aurad |
| 206 | Sundal | Sundal | Other | Santhpur/ Aurad |
| 207 | Korekal | Korekal | S.C | Santhpur/ Aurad |

| | | | | |
|---|---|---|---|---|
| 208 | Lidkar Colony (Aurad-B) | Aurad(B) | S.C | Santhpur/ Aurad |
| 209 | Sangam | Khed | Other | Santhpur/ Aurad |
| 210 | Chandeshwar | Diggi | Other | Santhpur/ Aurad |
| 211 | Dudaknal | Badalgaon | Other | Santhpur/ Aurad |
| 212 | Kamalnagar (Near Panchayat) | Kamalnagar | Other | Santhpur/ Aurad |
| 213 | Bargiyan Thanda | Wadgaon(D) | S.C | Santhpur/ Aurad |
| 214 | Wadgaon(D) | Wadgaon(D) | Other | Santhpur/ Aurad |
| 215 | Rampur | Diggi | S.C | Santhpur/ Aurad |
| 216 | Jojna | Jojna | Other | Santhpur/ Aurad |
| 217 | Nagur(M) | Jojna | Other | Santhpur/ Aurad |
| 218 | Hedgapur-1 | Hedgapur | Other | Santhpur/ Aurad |
| 219 | Dadgi C | Dadgi | Others | Bhalki |
| 220 | Kalwadi B | Dadgi | Others | Bhalki |
| 221 | Kuntesirsi | Kurubakhelgi | Others | Bhalki |
| 222 | Khatkchincholi B | Khatakchincholi | Others | Bhalki |
| 223 | Khatkchincholi D | Khatakchincholi | S.T | Bhalki |
| 224 | Methi Melkunda A | Methimelkunda | Others | Bhalki |
| 225 | Hunji K - A | Kanji | Others | Bhalki |
| 226 | Jeergyal | Inchuru | Others | Bhalki |
| 227 | Ekalaspurwadi | Dadgi | Others | Bhalki |
| 228 | Jyanti B | Jyanti | Others | Bhalki |
| 229 | Nilmnalli | Byalhalli K | Others | Bhalki |
| 230 | Halhalli K -A | Byalhalli K | Others | Bhalki |
| 231 | Halhalli K Thanda | Byalhalli K | S.C | Bhalki |
| 232 | Marooru A | Jolladappakka | Others | Bhalki |
| 233 | Sayagoan C | Sayagoan | Others | Bhalki |
| 234 | Naradasangam | Mehakar | Others | Bhalki |
| 235 | Mehakar E | Mehakar | S.T | Bhalki |
| 236 | Mehakar I | Mehakar | Others | Bhalki |
| 237 | Mehakar H | Mehakar | Others | Bhalki |
| 238 | Attarga A | Attarga | Others | Bhalki |
| 239 | Bolegoan | Mehakar | Others | Bhalki |
| 240 | Lakhangoan A | Lakhangoan | Others | Bhalki |
| 241 | Shivani A | Shivani | S.C | Bhalki |
| 242 | Methi Melkunda Wadi | Methimelkunda | S.C | Bhalki |
| 243 | Uchcha C | Mormbi | Others | Bhalki |
| 244 | Varawatti D | Varawatti | Others | Bhalki |
| 245 | Kororu A | Gorchincholi | Others | Bhalki |
| 246 | R.Goundagoan A | Mormbi | Others | Bhalki |
| 247 | Dhannur D | Dhannur | Others | Bhalki |
| 248 | Dhannur B | Dhannur | Others | Bhalki |
| 249 | Dhannur A | Dhannur | S.T | Bhalki |
| 250 | Varawatti Wadi | Varawatti | Others | Bhalki |
| 251 | Mavinahalli | Varawatti | Others | Bhalki |
| 252 | Malachapur D | Malchapur | Others | Bhalki |
| 253 | Kon Melkunda A | Konmelkunda | S.C | Bhalki |

| | | | | |
|---|---|---|---|---|
| 254 | Nagur K | Kosam | Others | Bhalki |
| 255 | Kashempur | Kosam | Others | Bhalki |
| 256 | Chandapur B | Baluru | Others | Bhalki |
| 257 | Halbarga D | Halbarga | S.C | Bhalki |
| 258 | Halhipparga A | Kosam | S.C | Bhalki |
| 259 | Kotagera A | Gorchincholi | Others | Bhalki |
| 260 | Atnur | Lanjawad | Others | Bhalki |
| 261 | Hanumanwadi | Dawargoan | Others | Bhalki |

**Deputy Director**
**Dept., of Women & Child Development,**
**Bidar**

## ಸರ್ಕಾರಿ ಆದೇಶ ಸಂಖ್ಯೆ: ಮಮಇ 303 ಐಸಿಡಿ 2017, ದಿನಾಂಕ:23.09.2017ಕ್ಕೆ ಅನುಬಂಧ

# ಅಂಗನವಾಡಿ ಕಾರ್ಯಕರ್ತೆ / ಸಹಾಯಕಿಯರನ್ನು ಆಯ್ಕೆ ಮಾಡಲು ಮಾರ್ಗಸೂಚಿಗಳು ಮತ್ತು ಅರ್ಹತೆಯ ಮಾನದಂಡಗಳು.

## I ಅಂಗನವಾಡಿ ಕಾರ್ಯಕರ್ತೆ / ಸಹಾಯಕಿಯರ ಆಯ್ಕೆಗೆ ಅರ್ಹತೆ ಮಾನದಂಡಗಳು:-

1) **ವಯೋಮಿತಿ:**

ಅಂಗನವಾಡಿ ಕಾರ್ಯಕರ್ತೆ / ಸಹಾಯಕಿಯರ ಹುದ್ದೆಗೆ ಅರ್ಜಿ ಸಲ್ಲಿಸಲು 18-35 ವರ್ಷ ವಯೋಮಿತಿಯೊಳಗಿರಬೇಕು.

2) **ಸ್ಥಳೀಯತೆ:**

ಅಂಗನವಾಡಿ ಕಾರ್ಯಕರ್ತೆ / ಸಹಾಯಕಿಯರ ಆಯ್ಕೆಗೆ ಸ್ಥಳೀಯರಾಗಿರಬೇಕು.

ಅಭ್ಯರ್ಥಿಗಳು ಅರ್ಜಿ ಸಲ್ಲಿಸಲು ನಿಗದಿಪಡಿಸಿದ ದಿನಾಂಕದ ಒಂದು(1) ವರ್ಷದೊಳಗೆ ಸಂಬಂಧಪಟ್ಟ ತಹಶೀಲ್ದಾರರಿಂದ / ಉಪ ತಹಶೀಲ್ದಾರರಿಂದ ಪಡೆದ ವಾಸಸ್ಥಳ ದೃಢೀಕರಣ ಪತ್ರವನ್ನು ಕಡ್ಡಾಯವಾಗಿ ಅರ್ಜಿಯೊಂದಿಗೆ ಸಲ್ಲಿಸತಕ್ಕದ್ದು.

3) **ವಿದ್ಯಾರ್ಹತೆ:**

i) **ಅಂಗನವಾಡಿ ಕಾರ್ಯಕರ್ತೆ:** ಎಸ್.ಎಸ್.ಎಲ್.ಸಿ. ತೇರ್ಗಡೆ. ಹೆಚ್ಚಿನ ವಿದ್ಯಾರ್ಹತೆಯನ್ನು ಆಯ್ಕೆಗೆ ಪರಿಗಣಿಸುವಂತಿಲ್ಲ.

ಅ) ಕರ್ನಾಟಕ ರಾಜ್ಯ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿ ನಡೆಸುವ ಮುಕ್ತ ಶಾಲೆ / ಮುಕ್ತ ವಿದ್ಯಾಲಯಗಳಲ್ಲಿ ಎಸ್.ಎಸ್.ಎಲ್.ಸಿ ತೇರ್ಗಡೆ ಹೊಂದಿದ ಅಭ್ಯರ್ಥಿಗಳು ಪ್ರಥಮ / ದ್ವಿತೀಯ ಭಾಷೆಯಾಗಿ ಕನ್ನಡ ಹಾಗೂ ಸಾಮಾನ್ಯ ಗಣಿತ ಮತ್ತು ಸಮಾಜಶಾಸ್ತ್ರ / ಸಮಾಜ ವಿಜ್ಞಾನ ವಿಷಯಗಳನ್ನು ಕಡ್ಡಾಯವಾಗಿ ವ್ಯಾಸಂಗ ಮಾಡಿದ್ದು, ಪ್ರಮಾಣ ಪತ್ರ / ಅಂಕಪಟ್ಟಿಯು ಗರಿಷ್ಠ 625, ಕನಿಷ್ಠ 219 ಅಂಕಗಳನ್ನು ಹೊಂದಿದಲ್ಲಿ, ಅಂತಹ ಅಭ್ಯರ್ಥಿಗಳನ್ನು ಪರಿಗಣಿಸತಕ್ಕದ್ದು.

ಆ) ಬೇರೆ ರಾಜ್ಯಗಳ ಶಾಲೆಗಳಲ್ಲಿ ವ್ಯಾಸಂಗ ಮಾಡಿದ್ದು, ಕನ್ನಡವನ್ನು ಪ್ರಥಮ / ದ್ವಿತೀಯ ಭಾಷೆಯಾಗಿ ಅಭ್ಯಾಸ ಮಾಡಿದ್ದರೂ, ಎಸ್.ಎಸ್.ಎಲ್.ಸಿ ಪರೀಕ್ಷೆಗೆ ಆ ರಾಜ್ಯದಲ್ಲಿ ನಿಗದಿಪಡಿಸಿದ ಗರಿಷ್ಠ ಹಾಗೂ ಕನಿಷ್ಠ ಅಂಕಗಳು ಹಾಗೂ ಕರ್ನಾಟಕ ರಾಜ್ಯದಲ್ಲಿ ನಿಗದಿಪಡಿಸಿದ ಗರಿಷ್ಠ ಹಾಗೂ ಕನಿಷ್ಠ ಅಂಕಗಳಲ್ಲಿ ವ್ಯತ್ಯಾಸವಿದ್ದಲ್ಲಿ, ಕರ್ನಾಟಕದಲ್ಲಿ ವ್ಯಾಸಂಗ ಮಾಡಿದ ಅಭ್ಯರ್ಥಿಗಳನ್ನು ಮಾತ್ರ ಪರಿಗಣಿಸತಕ್ಕದ್ದು.

ಇ) ಅಂಗನವಾಡಿ ಕಾರ್ಯಕರ್ತೆಯರು ಶಾಲಾ ಪೂರ್ವ ಶಿಕ್ಷಣವನ್ನು ಹಾಗೂ ದಾಖಲೆಗಳನ್ನು ಕನ್ನಡದಲ್ಲಿ ನಿರ್ವಹಿಸಬೇಕಾಗಿರುವುದರಿಂದ ಅಭ್ಯರ್ಥಿಗಳು ಯಾವುದೇ ಭಾಷಾ ಮಾಧ್ಯಮದಲ್ಲಿ ವ್ಯಾಸಂಗ ಮಾಡಿದ್ದರೂ ಹಾಗೂ ಯಾವುದೇ ರಾಜ್ಯದಲ್ಲಿ ವ್ಯಾಸಂಗ ಮಾಡಿದ್ದರೂ ಸಹ ಅವರು ಕನ್ನಡ ಭಾಷೆಯನ್ನು ಪ್ರಥಮ / ದ್ವಿತೀಯ ಭಾಷೆಯಾಗಿ ವ್ಯಾಸಂಗ ಮಾಡಿರಬೇಕು ಹಾಗೂ ಮಾತೃಭಾಷೆ ಕನ್ನಡವಲ್ಲದೇ ಇರುವ ಅಭ್ಯರ್ಥಿಗಳಿಗೆ ಆಯ್ಕೆ ಸಮಿತಿಯು ಆಯ್ಕೆ ಸಮಯದಲ್ಲಿ ಸಂದರ್ಶನ ಏರ್ಪಡಿಸಿ ಹಾಗೂ ಅವಶ್ಯವಿದ್ದಲ್ಲಿ ಕನ್ನಡ ಭಾಷೆಯ ಜ್ಞಾನದ ಕುರಿತಂತೆ ಓದಿಸಿ, ಬರೆಸಿ ಅವರ ಕನ್ನಡ ಭಾಷಾ ಜ್ಞಾನವನ್ನು ಪರೀಕ್ಷಿಸಿ ಅವರನ್ನು ಆಯ್ಕೆಯನ್ನು ಮಾಡುವ ಬಗ್ಗೆ ಸಮಿತಿಯವರು ನಿರ್ಧರಿಸುವುದು.

ii) **ಅಂಗನವಾಡಿ ಸಹಾಯಕಿ:**

ಅ) ಕನಿಷ್ಠ 4ನೇ ತರಗತಿ ತೇರ್ಗಡೆ, ಗರಿಷ್ಠ 9ನೇ ತರಗತಿ ತೇರ್ಗಡೆ. ಇದರಲ್ಲಿ ಹೆಚ್ಚಿನ ವಿದ್ಯಾರ್ಹತೆಯುಳ್ಳವರನ್ನು ಆಯ್ಕೆ ಮಾಡಬೇಕು. 9ನೇ ತರಗತಿಗಿಂತ ಹೆಚ್ಚಿನ ವಿದ್ಯಾರ್ಹತೆಯನ್ನು ಆಯ್ಕೆಗೆ ಪರಿಗಣಿಸುವಂತಿಲ್ಲ.

ಆ) ಒಂದೇ ವಿದ್ಯಾರ್ಹತೆಯುಳ್ಳ ಒಂದಕ್ಕಿಂತ ಹೆಚ್ಚು ಅರ್ಜಿ ಬಂದಿದ್ದಲ್ಲಿ ಹೆಚ್ಚು ಅಂಕಗಳಿಸಿದವರನ್ನು ಆಯ್ಕೆ ಮಾಡಬೇಕು.

## II ಅಂಗನವಾಡಿ ಕೇಂದ್ರಗಳ ವ್ಯಾಪ್ತಿ ಗುರ್ತಿಸುವ ಬಗ್ಗೆ:-

1) ಅಂಗನವಾಡಿ ಕಾರ್ಯಕರ್ತೆ / ಸಹಾಯಕಿಯರು ಗೌರವಸೇವೆಗೆ ಸೇರಿದೆ, ಅಂಗನವಾಡಿ ಕೇಂದ್ರ ಪ್ರಾರಂಭಿಸುವ ಗ್ರಾಮಾಂತರ ಪದೇಶದ ಕಂದಾಯ ಗ್ರಾಮ / ನಗರ ಪ್ರದೇಶದ ಕಂದಾಯ ವಾರ್ಡ್‌ನ ಒಟ್ಟು ಜನಸಂಖ್ಯೆಯು ಶೇಕಡ 40ಕ್ಕಿಂತ ಹೆಚ್ಚು ಪರಿಶಿಷ್ಟ ಜಾತಿ ಹಾಗೂ ಶೇಕಡ 40ಕ್ಕಿಂತ ಹೆಚ್ಚು ಪರಿಶಿಷ್ಟ ವರ್ಗದವರನ್ನು ಒಳಗೊಂಡಿದ್ದ ಸಂದರ್ಭದಲ್ಲಿ ಈ ವರ್ಗಗಳ ಪೈಕಿ ಅತೀ ಹೆಚ್ಚು ಜನಸಂಖ್ಯೆಯಿರುವ ವರ್ಗದವರಿಗೆ ಕಾರ್ಯಕರ್ತೆ / ಸಹಾಯಕಿಯ ಹುದ್ದೆಯನ್ನು ನಿಗದಿಪಡಿಸಿ ಪ್ರಕಟಣೆ ಹೊರಡಿಸಬೇಕು. ಪ್ರಕಟಣೆಯಲ್ಲಿ ಸ್ಪಷ್ಟವಾಗಿ ಯಾವ ವರ್ಗದವರಿಗೆ ಹುದ್ದೆಯನ್ನು ನಿಗದಿಪಡಿಸಲಾಗಿದೆಯೆಂದು ಸೂಚಿಸಬೇಕು. ನಿಗದಿಪಡಿಸಿದ ವರ್ಗದವರನ್ನೆ ಆಯ್ಕೆ ಮಾಡುವುದು.

2) ಒಂದು ಗ್ರಾಮದಲ್ಲಿ ಈಗಾಗಲೇ ಅಂಗನವಾಡಿ ಕೇಂದ್ರವಿದ್ದು ಪುನ: ಬೇಡಿಕೆಗೆ ಅನುಸಾರವಾಗಿ ಹೊಸ ಕೇಂದ್ರವನ್ನು ಪ್ರಾರಂಭಿಸುತ್ತಿದ್ದಲ್ಲಿ, ಹೊಸ ಕೇಂದ್ರ ಪ್ರಾರಂಭಿಸುವ ಪ್ರದೇಶದ (ವ್ಯಾಪ್ತಿಯ) ಜನಸಂಖ್ಯೆಯಲ್ಲಿ ಶೇಕಡ 40ಕ್ಕಿಂತ ಹೆಚ್ಚು ಜನಸಂಖ್ಯೆ ಪರಿಶಿಷ್ಟ ಜಾತಿ ಅಥವಾ ಪರಿಶಿಷ್ಟ ವರ್ಗದವರಿದ್ದಲ್ಲಿ ಆ ಅಂಗನವಾಡಿ ಕೇಂದ್ರಕ್ಕೆ ಸದರಿ . ವರ್ಗದವರಿಗೆ ಕಾರ್ಯಕರ್ತೆ / ಸಹಾಯಕಿ ಹುದ್ದೆಯನ್ನು ನಿಗದಿಪಡಿಸಿ ಪ್ರಕಟಣೆ ಹೊರಡಿಸಿ ಅರ್ಜಿಗಳನ್ನು ಆಹ್ವಾನಿಸಿ ಆ ವರ್ಗದವರನ್ನೇ ಆಯ್ಕೆ ಮಾಡುವುದು.

3) ಶೇಕಡ 25ಕ್ಕಿಂತ ಹೆಚ್ಚು ಅಲ್ಪಸಂಖ್ಯಾತ (ಮುಸ್ಲಿಮರು, ಕ್ರಿಶ್ಚಿಯನರು, ಜೈನರು, ಬೌದ್ಧರು, ಪಾರ್ಸಿಗಳು ಮತ್ತು ಸಿಕ್ಕರು) ಜನಸಂಖ್ಯೆಯಿರುವ ಪದೇಶದ ಅಂಗನವಾಡಿ ಕೇಂದ್ರಗಳಲ್ಲಿ ಕನ್ನಡ ಭಾಷೆಯೊಂದಿಗೆ ಆಯಾ ಅಲ್ಪ ಸಂಖ್ಯಾತ ಸಮುದಾಯದ ಭಾಷೆ ಬಲ್ಲವರನ್ನು ಕಾರ್ಯಕರ್ತೆ / ಸಹಾಯಕಿಯ ಹುದ್ದೆಗೆ ಆಯ್ಕೆ ಮಾಡುವುದು.

4) ಪರಿಶಿಷ್ಟ ಜಾತಿ / ಪರಿಶಿಷ್ಟ ಪಂಗಡದವರಿಗೆ ಕಾರ್ಯಕರ್ತೆ / ಸಹಾಯಕಿ ಹುದ್ದೆ ನಿಗದಿಪಡಿಸಿದ ಅಂಗನವಾಡಿ ಕೇಂದ್ರಗಳಲ್ಲಿ ನಿಗದಿತ ವರ್ಗದವರಿಂದ ಅರ್ಜಿಗಳು ಬಾರದಿದ್ದಲ್ಲಿ ಮರುಪ್ರಕಟಣೆಯನ್ನು 7 ದಿವಸಗಳೊಳಗೆ ಹೊರಡಿಸಿ ಪುನ:ಅರ್ಜಿಗಳನ್ನು ಆಹ್ವಾನಿಸಬೇಕು.ಆಗಲೂ ನಿಗದಿತ ವರ್ಗದವರಿಂದ ಅರ್ಜಿಗಳು ಬಾರದೇ ಹೋದಲ್ಲಿ ಪುನ: 10 ದಿನಗಳೊಳಗೆ ಪ್ರಕಟಣೆ ಹೊರಡಿಸಿ ಸಾಮಾನ್ಯ ವರ್ಗದವರಿಂದ ಅರ್ಜಿ ಆಹ್ವಾನಿಸಿ ಆಯ್ಕೆ ಮಾಡುವುದು.

5) ಅಂಗನವಾಡಿ ಕಾರ್ಯಕರ್ತೆ / ಸಹಾಯಕಿಯರ ಆಯ್ಕೆಗೆ ಸಂಬಂಧಿಸಿದ ಅಂಗನವಾಡಿ ಕೇಂದ್ರದ ಗ್ರಾಮಾಂತರ ಪ್ರದೇಶದ ಕಂದಾಯ ಗ್ರಾಮ ಹಾಗೂ ನಗರ ಪ್ರದೇಶದ ಕಂದಾಯ ವಾರ್ಡ್‌ಗಳನ್ನು ಪರಿಗಣಿಸಬೇಕು, ಚುನಾವಣಾ ವಾರ್ಡ್‌ಗಳನ್ನು ಪರಿಗಣಿಸುವಂತಿಲ್ಲ.

6) ಒಂದು ಗ್ರಾಮದಲ್ಲಿ ಒಂದಕ್ಕಿಂತ ಹೆಚ್ಚು ಅಂಗನವಾಡಿ ಕೇಂದ್ರಗಳಿದ್ದಾಗ, ಆ ಕೇಂದ್ರ ವ್ಯಾಪ್ತಿಗೆ ಸಂಬಂಧಪಟ್ಟ ಗ್ರಾಮ / ವಾರ್ಡ್‌ರವರಿಂದ ಮಾತ್ರ ಅರ್ಜಿಗಳನ್ನು ಆಹ್ವಾನಿಸಬೇಕು. ಒಂದು ಪಕ್ಷ ಆ ಗ್ರಾಮ / ವಾರ್ಡ್‌ರವರಿಂದ ಅರ್ಜಿಗಳು ಸ್ವೀಕೃತವಾಗದೇ ಹೋದಲ್ಲಿ 7 ದಿವಸಗಳೊಳಗೆ ಮರು ಪ್ರಕಟಣೆ ಹೊರಡಿಸಬೇಕು. ಎರಡನೆಯ ಬಾರಿಯೂ ಸ್ಥಳೀಯರಿಂದ ಅರ್ಜಿ ಸ್ವೀಕೃತವಾಗದಿದ್ದಲ್ಲಿ ಪುನ: 10 ದಿವಸಗಳೊಳಗೆ ಪ್ರಕಟಣೆ ಹೊರಡಿಸಿ ಅತ್ಯಂತ ಸಮೀಪದ ಗ್ರಾಮ / ವಾರ್ಡ್‌ಗಳಿಂದ ಅರ್ಹ ಅಭ್ಯರ್ಥಿಗಳನ್ನು ಆಯ್ಕೆಗೆ ಪರಿಗಣಿಸುವುದು.

7) ಅಂಗನವಾಡಿ ಕಾರ್ಯಕರ್ತೆ/ಸಹಾಯಕಿಯರ ಆಯ್ಕೆಗಾಗಿ ಎರಡನೇ ಬಾರಿಗೆ ಯಾವುದೇ ಮರು ಪ್ರಕಟಣೆ ಹೊರಡಿಸುವ ಮುನ್ನ ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳು ಸ್ವತ: ಗ್ರಾಮ / ವಾರ್ಡ್‌ಗೆ ಭೇಟಿ ನೀಡಿ ಆ ವರ್ಗದ / ಗ್ರಾಮದ / ವಾರ್ಡ್‌ನ ಅರ್ಹ ಅಭ್ಯರ್ಥಿಗಳು ಲಭ್ಯವಿಲ್ಲವೆಂಬ ಬಗ್ಗೆ ಸ್ಥಳ ಪರಿಶೀಲನಾವರದಿ ಪಡೆದುಕೊಂಡಿರಬೇಕು.

8) ಅಂಗನವಾಡಿ ಕಾರ್ಯಕರ್ತೆ / ಸಹಾಯಕಿಯರ ಆಯ್ಕೆಗಾಗಿ ಪ್ರಕಟಣೆಯನ್ನು ಸ್ಪಷ್ಟ / ನಿಖರವಾಗಿ ಹೊರಡಿಸತಕ್ಕದ್ದು, ಹುದ್ದೆ ಖಾಲಿಯಿರುವ ಸ್ಥಳ, ಆ ಹುದ್ದೆ ಜನಸಂಖ್ಯೆ ಆಧಾರದಲ್ಲಿ ಯಾವ ವರ್ಗಕ್ಕೆ ನಿಗದಿಪಡಿಸಲಾಗಿದೆ ಎಂಬ ಬಗ್ಗೆ ತಿಳಿಸಿ ಸ್ಥಳೀಯ ದಿನಪತ್ರಿಕೆಗಳಲ್ಲಿ ಪ್ರಕಟಣೆ ಹೊರಡಿಸತಕ್ಕದ್ದು. ಪ್ರಕಟಣೆಯನ್ನು ಗ್ರಾಮದ ಕೃಷಿ ಸಂಪರ್ಕ ಕೇಂದ್ರ, ಪ್ರಾಥಮಿಕ ಆರೋಗ್ಯ ಕೇಂದ್ರ, ಶಾಲೆ, ಗ್ರಾಮ ಲೆಕ್ಕಿಗರ

ಕಛೇರಿ, ಅಂಗನವಾಡಿ ಕಟ್ಟಡ, ಗ್ರಾಮ ಪಂಚಾಯತ್ ಕಛೇರಿ ಕಟ್ಟಡ ಹಾಗೂ ಇನ್ನಿತರ ಸಾರ್ವಜನಿಕ ಸ್ಥಳಗಳಲ್ಲಿ ಸೂಚನಾ ಫಲಕದ ಮೇಲೆ ಪ್ರದರ್ಶಿಸತಕ್ಕದ್ದು. ಪ್ರಕಟಣೆ ಹೊರಡಿಸಿದ ದಿನಾಂಕದಿಂದ 25 ದಿನಗಳೊಳಗೆ ಅರ್ಜಿ ಸಲ್ಲಿಸುವ ಕಾಲಾವಧಿಯನ್ನು ನಿಗದಿಪಡಿಸಿರತಕ್ಕದ್ದು ಹಾಗೂ ಪ್ರಕಟಣೆಯ ಪ್ರತಿಯನ್ನು ಆಯ್ಕೆ ಸಮಿತಿಯ ಎಲ್ಲಾ ಸದಸ್ಯರಿಗೂ ಕಳುಹಿಸತಕ್ಕದ್ದು.

9) ಅಂಗನವಾಡಿ ಕಾರ್ಯಕರ್ತೆ / ಸಹಾಯಕಿ ಹುದ್ದೆಗೆ ಅರ್ಜಿ ಸಲ್ಲಿಸಿದವರಲ್ಲಿ ಒಂದಕ್ಕಿಂತ ಹೆಚ್ಚು ಅಭ್ಯರ್ಥಿಗಳು ಸಮಾನ ಅಂಕ ಗಳಿಸಿದ್ದಲ್ಲಿ ವಯೋಹಿರಿತನವನ್ನು ಪರಿಗಣಿಸಬೇಕು. ವಯಸ್ಸು ಸಮಾನವಾಗಿದ್ದಲ್ಲಿ ವಿವಾಹಿತರನ್ನು ಪರಿಗಣಿಸಬೇಕು.

10) ಅಂಗನವಾಡಿ ಕಾರ್ಯಕರ್ತೆ ಹುದ್ದೆ ಖಾಲಿಯಾದ / ಹೊಸ ಕೇಂದ್ರಕ್ಕೆ ಅರ್ಹ ಸಹಾಯಕಿಯರಿಂದ ಕಾರ್ಯಕರ್ತೆ ಹುದ್ದೆ ಕೋರಿ ಅರ್ಜಿ ಸ್ವೀಕೃತವಾಗಿದ್ದಲ್ಲಿ, ಅವರನ್ನೇ ಆಯ್ಕೆ ಮಾಡತಕ್ಕದ್ದು. ಅಂತಹ ಯಾವುದೇ ಅರ್ಜಿಗಳು ಸ್ವೀಕೃತವಾಗಿಲ್ಲದಿದ್ದಲ್ಲಿ, ಸ್ಥಾನಪಲ್ಲಟ ಕೋರಿ ಬಂದಿರುವ ಅರ್ಜಿಗಳನ್ನು ಪರಿಗಣಿಸುವುದು. ಸ್ಥಾನಪಲ್ಲಟ ಕೋರಿ ಯಾವುದೇ ಅರ್ಜಿಗಳು ಸ್ವೀಕೃತವಾಗಿಲ್ಲದಿದ್ದಲ್ಲಿ ಹೊಸದಾಗಿ ಆಯ್ಕೆ ಮಾಡುವ ಪ್ರಕ್ರಿಯೆಯನ್ನು ಪ್ರಾರಂಭಿಸಿ ಗರಿಷ್ಠ 2 ತಿಂಗಳೊಳಗೆ ಮುಗಿಸತಕ್ಕದು.

11) ಸ್ಥಳೀಯ ಚುನಾಯಿತ ಪ್ರತಿನಿಧಿಗಳು ಅಂಗನವಾಡಿ ಕಾರ್ಯಕರ್ತೆ / ಸಹಾಯಕಿಯರ ಹುದ್ದೆಗೆ ಅರ್ಜಿ ಸಲ್ಲಿಸಿದ್ದು, ಆಯ್ಕೆಯಾಗುವ ಸಂಭವವಿದ್ದಲ್ಲಿ, ಆಯ್ಕೆ ಪಟ್ಟಿ ಪ್ರಕಟಿಸುವ ಮುನ್ನ ಚುನಾಯಿತ ಸದಸ್ಯತ್ವಕ್ಕೆ ರಾಜೀನಾಮೆ ನೀಡಿ ರಾಜೀನಾಮೆ ಅಂಗೀಕೃತ ಪತ್ರ ನೀಡಬೇಕಾಗಿರುವುದು ಕಡ್ಡಾಯ. ಅಂದರೆ ಯಾವುದಾದರೂ ಒಂದು ಸ್ಥಾನದಲ್ಲಿ ಮಾತ್ರ ಕೆಲಸ ನಿರ್ವಹಿಸಲು ಅವಕಾಶವಿದೆ.

## III) ಆಯ್ಕೆ ಆದ್ಯತೆ :

ಈ ಕೆಳಕಂಡಂತೆ ಆದ್ಯತೆ ಪಡೆಯಲು ಇಚ್ಛಿಸುವ ಅರ್ಜಿದಾರರು ನಿಗದಿತ ವಿದ್ಯಾರ್ಹತೆ ಹೊಂದಿದ್ದು, ವಯೋಮಿತಿಯೊಳಗೆ ಮತ್ತು ಸ್ಥಳೀಯರಾಗಿರಬೇಕಾಗಿರುವುದು ಕಡ್ಡಾಯ.

### 1) ಆಸಿಡ್ ದಾಳಿಗೊಳಗಾದವರ ಆಯ್ಕೆ:-

ಆಸಿಡ್ ದಾಳಿಗೆ ತುತ್ತಾದ ಮಹಿಳೆಯರು ಅಂಗನವಾಡಿ ಕಾರ್ಯಕರ್ತೆ / ಸಹಾಯಕಿಯರ ಹುದ್ದೆಗೆ ಅರ್ಜಿ ಸಲ್ಲಿಸಿದ್ದಲ್ಲಿ, ಇತರ ಎಲ್ಲಾ ಸ್ವೀಕೃತ ಅರ್ಜಿಗಳನ್ನು ಪರಿಗಣಿಸದೆ ಮೊದಲ ಆದ್ಯತೆ ಮೇರೆಗೆ ನೇರವಾಗಿ ಅವರನ್ನೆ ಆಯ್ಕೆ ಮಾಡತಕ್ಕದ್ದು

### 2) ಇಲಾಖೆಯ ಸಂಸ್ಥೆಗಳ ನಿವಾಸಿಗಳ ಆಯ್ಕೆ:-

ಅಂಗನವಾಡಿ ಕಾರ್ಯಕರ್ತೆ / ಸಹಾಯಕಿಯರ ಹುದ್ದೆಗಳಿಗೆ ಬಾಲನ್ಯಾಯ ಕಾಯ್ದೆಯಡಿ ಇಲಾಖೆಯ ಸಂಸ್ಥೆಗಳಲ್ಲಿ ಹಾಗೂ ರಾಜ್ಯ ಮಹಿಳಾ ನಿಲಯಗಳಲ್ಲಿ ಆಶ್ರಯ ಪಡೆದ ಹಾಲಿ / ಮಾಜಿ ನಿವಾಸಿಗಳು ಅರ್ಜಿ ಸಲ್ಲಿಸಿದಾಗ ಮಾರ್ಗಸೂಚಿಯ ಕ್ರಮ ಸಂಖ್ಯೆ **III (1)** ನೆಯವರನ್ನು ಹೊರತು ಪಡಿಸಿ ಇತರ ಎಲ್ಲಾ ಸ್ವೀಕೃತ ಅರ್ಜಿಗಳನ್ನು ಪರಿಗಣಿಸಿದೆ ಎರಡನೆ ಆದ್ಯತೆ ಮೇರೆಗೆ ನೇರವಾಗಿ ಅವರನ್ನೆ ಆಯ್ಕೆ ಮಾಡತಕ್ಕದ್ದು

### 3) ವಿಧವೆಯರ ಆಯ್ಕೆ:-

ಅ) ಅಂಗನವಾಡಿ ಕಾರ್ಯಕರ್ತೆ / ಸಹಾಯಕಿಯರ ಹುದ್ದೆಗಳಿಗೆ ವಿಧವೆಯರು ಅರ್ಜಿ ಸಲ್ಲಿಸಿದಾಗ ಮಾರ್ಗಸೂಚಿಯ **III (1)** ಮತ್ತು **(2)** ನೆಯವರನ್ನು ಹೊರತು ಪಡಿಸಿ ಇತರ ಎಲ್ಲಾ ಸ್ವೀಕೃತ ಅರ್ಜಿಗಳನ್ನು ಪರಿಗಣಿಸಿದೆ ಮೂರನೆ ಆದ್ಯತೆ ಮೇರೆಗೆ ನೇರವಾಗಿ ಅವರನ್ನೆ ಆಯ್ಕೆ ಮಾಡತಕ್ಕದ್ದು ಅರ್ಜಿ ಸಲ್ಲಿಸಿದ ನಂತರ ವಿಧವೆಯಾದಲ್ಲಿ ಪರಿಗಣಿಸುವಂತಿಲ್ಲ.

ಆ) ವಿಧವೆಯರಲ್ಲಿ, ಆತ್ಮಹತ್ಯೆ ಮಾಡಿಕೊಂಡ ರೈತರ ಪತ್ನಿಗೆ (ವಿಧವೆಗೆ) ಪ್ರಥಮ ಆದ್ಯತೆ ನೀಡತಕ್ಕದ್ದು

ಇ) ವಿಧವೆಯರು ತಾವು ಪ್ರಸ್ತುತ ಎಲ್ಲಿ ವಾಸವಿರುವುದಾಗಿ, ವಾಸಸ್ಥಳ ದೃಢೀಕರಣವನ್ನು ಸಲ್ಲಿಸಿರುತ್ತಾರೆ, ಆ ಸ್ಥಳವನ್ನೇ ಅವರ ವಾಸಸ್ಥಳವೆಂದು ಪರಿಗಣಿಸತಕ್ಕದ್ದು.

ಈ) ಒಂದೇ ಹುದ್ದೆಗೆ ಇಬ್ಬರು ವಿಧವೆಯರು ಅರ್ಜಿ ಸಲ್ಲಿಸಿದ್ದಲ್ಲಿ ಗರಿಷ್ಠ ಅಂಕ ಪಡೆದವರನ್ನು ಆಯ್ಕೆ ಮಾಡಬಹುದಾಗಿದೆ.

4) **ಅಂಗವಿಕಲರ ಆಯ್ಕೆ:-**

ಇ) ಅಂಗನವಾಡಿ ಕಾರ್ಯಕರ್ತೆಯರ ಹುದ್ದೆಗಳಿಗೆ ಅಂಗವಿಕಲರು ಅರ್ಜಿ ಸಲ್ಲಿಸಿದಾಗ, ಮಾರ್ಗಸೂಚಿಯ III (1) (2) ಮತ್ತು (3) ನೆಯವರನ್ನು ಹೊರತು ಪಡಿಸಿ ಇತರ ಎಲ್ಲಾ ಸ್ವೀಕೃತ ಅರ್ಜಿಗಳನ್ನು ಪರಿಗಣಿಸಿದೆ ನಾಲ್ಕನೆ ಆದ್ಯತೆ ಮೇರೆಗೆ ನೇರವಾಗಿ ಅವರನ್ನೆ ಆಯ್ಕೆ ಮಾಡತಕ್ಕದ್ದು

ಈ) ಅಂಗವಿಕಲರು ಪ್ರಸ್ತುತ ತಾವು ಎಲ್ಲಿ ವಾಸವಾಗಿರುವುದಾಗಿ ವಾಸಸ್ಥಳ ಪ್ರಮಾಣ ಪತ್ರವನ್ನು ಸಲ್ಲಿಸಿರುತ್ತಾರೋ ಆ ಸ್ಥಳವನ್ನೆ ಅವರ ವಾಸಸ್ಥಳವೆಂದು ಪರಿಗಣಿಸತಕ್ಕದ್ದು.

ಉ) ಅಂಗನವಾಡಿ ಕಾರ್ಯಕರ್ತೆ ಹುದ್ದೆಯಲ್ಲಿ 3-6 ವರ್ಷ ಮಕ್ಕಳಿಗೆ ಆಟ ಮತ್ತು ಅಭಿನಯ ಗೀತೆಗಳ ಮೂಲಕ ಶಾಲಾ ಪೂರ್ವ ಶಿಕ್ಷಣವನ್ನು ನೀಡಲಾಗುತ್ತಿದ್ದು ಚಟುವಟಿಕೆ ವೇಳೆಯಲ್ಲಿ ಮಕ್ಕಳನ್ನು ಹಿಡಿದೆತ್ತಿ ನಿಲ್ಲಿಸಲು ಹಾಗೂ ಅಭಿನಯ ಮಾಡಿ ತೋರಿಸಬೇಕಾಗಿರುತ್ತದೆ. ವೃತ್ತಸಭೆ, ತಾಯಂದಿರ ಸಭೆ ಮತ್ತು ಮನೆ ಭೇಟಿ ನಿರ್ವಹಿಸಬೇಕಾಗಿರುತ್ತದೆ. ಆದ ಕಾರಣ ಕಿವುಡರು ಮತ್ತು ಮೂಕರು, ಕುರುಡರು, ಬುದ್ಧಿ ಮಾಂದ್ಯರು, ಮಾನಸಿಕ ಅಸ್ವಸ್ಥರು ಕಾರ್ಯಕರ್ತೆ ಹುದ್ದೆಗೆ ಅರ್ಹರಲ್ಲ.

ಊ) ಅಂಗನವಾಡಿ ಸಹಾಯಕಿಯ ಹುದ್ದೆಯಲ್ಲಿ ಅಂಗನವಾಡಿ ಫಲಾನುಭವಿಗಳಿಗೆ ಪೂರಕ ಪೌಷ್ಠಿಕ ಆಹಾರವನ್ನು ಬೇಯಿಸಿ / ಸಿದ್ಧಪಡಿಸಿ ಉಣಬಡಿಸುವುದು, ಕೇಂದ್ರವನ್ನು ಸ್ವಚ್ಛಗೊಳಿಸುವುದು, ಮಕ್ಕಳನ್ನು ಅವರ ಮನೆಗಳಿಂದ ಕೇಂದ್ರಕ್ಕೆ ಕರೆತರುವುದು ಹಾಗೂ ಕಾರ್ಯಕರ್ತೆಯು ವೃತ್ತಸಭೆ, ತಾಯಂದಿರ ಸಭೆ ಮತ್ತು ಮನೆ ಭೇಟಿಗೆ ಹೋದಾಗ ಅಂಗನವಾಡಿ ಕೇಂದ್ರದ ಜವಾಬ್ದಾರಿಯನ್ನು ನಿರ್ವಹಿಸಬೇಕು. ಆದ್ದರಿಂದ ಸಹಾಯಕಿ ಹುದ್ದೆಗೆ ಅಂಗವಿಕಲ ಅಭ್ಯರ್ಥಿಗಳು ಅರ್ಜಿ ಸಲ್ಲಿಸಲು ಅವಕಾಶವಿರುವುದಿಲ್ಲ.

ಋ) ಇತರೆ ದೈಹಿಕ ಅಂಗವೈಕಲ್ಯತೆ ಶೇ.60 ಮೀರದಂತೆ ಇರುವವರು ಅರ್ಜಿ ಸಲ್ಲಿಸಬಹುದಾಗಿದೆ. ಅಂಗೀಕೃತ ಪ್ರಾಧಿಕಾರ(ಜಿಲ್ಲಾ ವೈದ್ಯಕೀಯ ಮಂಡಳಿ)ದಿಂದ ಪಡೆದ ಪ್ರಮಾಣ ಪತ್ರವನ್ನು ಅರ್ಜಿಯೊಂದಿಗೆ ಹಾಜರುಪಡಿಸಬೇಕು.

ಎ) ಅಂಗವಿಕಲ ಅಭ್ಯರ್ಥಿಗಳನ್ನು ಆಯ್ಕೆಮಾಡುವ ಸಂದರ್ಭದಲ್ಲಿ ಅಂಗವಿಕಲತೆಯ ಪ್ರಮಾಣದ ಬಗ್ಗೆ ಸಂಶಯ ಉಂಟಾದಲ್ಲಿ ಆ ಅಭ್ಯರ್ಥಿಯನ್ನು ಆಯ್ಕೆ ಸಮಿತಿಯ ಮುಂದೆ ಖುದ್ದು ಹಾಜರಾಗಲು ಸೂಚಿಸಿ ಸದರಿ ಹುದ್ದೆ ನಿರ್ವಹಿಸಲು ಸಮರ್ಥರಿರುವ ಬಗ್ಗೆ ಸಮಿತಿಯೇ ಪರಿಶೀಲಿಸಿ ನಿರ್ಧರಿಸತಕ್ಕದ್ದು.

ಋ) ಒಂದೇ ಹುದ್ದೆಗೆ ಇಬ್ಬರು ಅಂಗವಿಕಲರು ಅರ್ಜಿ ಸಲ್ಲಿಸಿದ್ದಲ್ಲಿ ಗರಿಷ್ಠ ಅಂಕ ಪಡೆದವರನ್ನು ಆಯ್ಕೆ ಮಾಡಬಹುದಾಗಿದೆ.

## IV) ಬೋನಸ್ ಅಂಕಗಳು:- (ಅಂಗನವಾಡಿ ಕಾರ್ಯಕರ್ತೆ/ಸಹಾಯಕಿಯರಿಗೆ)

1) ಮಾಜಿ ದೇವದಾಸಿಯ ಮಗಳು,

2) ಯೋಜನಾ ನಿರಾಶ್ರಿತರು

3) ವಿಚ್ಛೇದಿತ ಮಹಿಳೆಯರು,

4) ಪರಿತ್ಯಕ್ತೆಯರು

ಹೆಚ್ಚಿನ 5 ಬೋನಸ್ ಅಂಕಗಳಿಗೆ ಅರ್ಹರಾಗಿರುತ್ತಾರೆ. ಪ್ರತಿ ವಿನಾಯಿತಿಗೂ 5 ಬೋನಸ್ ಅಂಕ ನೀಡುವುದು, ಆದರೆ ಯಾವುದೇ ಕಾರಣಕ್ಕೂ ಅವರು ವಿದ್ಯಾರ್ಹತೆಯಲ್ಲಿ ಗಳಿಸಿದ ಅಂಕಕ್ಕೆ ಶೇಕಡಾ 5(5%) ಅಂಕ ನೀಡುವಂತಿಲ್ಲ. ಉದಾ: ಒಬ್ಬ ಅಭ್ಯರ್ಥಿಯು ನಿರಾಶ್ರಿತರು, ಪರಿತ್ಯಕ್ತೆ, ಮಾಜಿ ದೇವದಾಸಿ, ವಿಚ್ಛೇದಿತರು ಆಗಿದ್ದಲ್ಲಿ ಪ್ರತಿ ವಿನಾಯಿತಿಗೂ 5 ಬೋನಸ್ ಅಂಕಗಳನ್ನು ನೀಡುವುದು. ಅಂದರೆ ಸದರಿಯವರು ನಿಗದಿತ ವಿದ್ಯಾರ್ಹತೆಯಲ್ಲಿ ಗಳಿಸಿದ ಅಂಕಗಳಿಗೆ ಮಾಜಿ ದೇವದಾಸಿಯರ ಅವಿವಾಹಿತ ಹೆಣ್ಣು ಮಕ್ಕಳು +5, ಯೋಜನಾ ನಿರಾಶ್ರಿತರು +5, ವಿಚ್ಛೇದಿತ ಮಹಿಳೆಯರು +5, ಪರಿತ್ಯಕ್ತೆಯರು +5, ಒಟ್ಟು 20 ಬೋನಸ್ ಅಂಕಗಳನ್ನು ನೀಡುವುದು. ಬೋನಸ್ ಅಂಕ ಪಡೆಯಲು ಸಂಬಂಧಿತ ದಾಖಲೆಗಳನ್ನು ಅರ್ಜಿಯೊಂದಿಗೆ ಲಗತ್ತಿಸಬೇಕಾಗಿರುವುದು ಕಡ್ಡಾಯ.

## V) ಆನ್-ಲೈನ್ ಅರ್ಜಿಯೊಂದಿಗೆ ಲಗತ್ತಿಸಬೇಕಾದ ದಾಖಲೆಗಳು:-

1) ಅರ್ಜಿ ನಿಗದಿತ ನಮೂನೆಯಲ್ಲಿ. (ಆನ್-ಲೈನ್)
2) ಜನನ ಪ್ರಮಾಣ ಪತ್ರ / ಜನ್ಮ ದಿನಾಂಕ ಇರುವ ಎಸ್.ಎಸ್.ಎಲ್.ಸಿ ಅಂಕ ಪಟ್ಟಿ.
3) ನಿಗದಿತ ವಿದ್ಯಾರ್ಹತೆಯ ಅಂಕಪಟ್ಟಿ.
4) ತಹಶೀಲ್ದಾರರು/ ಉಪತಹಶೀಲ್ದಾರರಿಂದ ಪಡೆದ ಒಂದು(1)ವರ್ಷದೊಳಗಿನ ವಾಸಸ್ಥಳ ದೃಢೀಕರಣ ಪತ್ರ.
5) ಅಭ್ಯರ್ಥಿಗಳ ಜಾತಿ ಪ್ರಮಾಣ ಪತ್ರ..
6) ಪತಿಯ ಮರಣ ಪ್ರಮಾಣ ಪತ್ರ (ವಿಧವಾ ವೇತನದ ಧೃಢೀಕರಣವನ್ನು ಪರಿಗಣಿಸುವಂತಿಲ್ಲ).
7) ಆತ್ಮಹತ್ಯೆ ಮಾಡಿಕೊಂಡ ರೈತರ ಪತ್ನಿ ಎಂದು ಉಪ ವಿಭಾಗಾಧಿಕಾರಿಗಳಿಂದ ಪಡೆದ ಪ್ರಮಾಣ ಪತ್ರ
8) ಅಂಗವಿಕಲತೆ ಪ್ರಮಾಣ ಪತ್ರ (ಅಂಗವಿಕಲ ವೇತನದ ಧೃಢೀಕರಣವನ್ನು ಪರಿಗಣಿಸುವಂತಿಲ್ಲ).
9) ವಿಚ್ಛೇಧನ ಪ್ರಮಾಣ ಪತ್ರ. ( ನ್ಯಾಯಾಲಯದಿಂದ ಪಡೆದಿರಬೇಕು)
10) ಕರ್ನಾಟಕ ರಾಜ್ಯ ಮಹಿಳಾ ಅಭಿವೃದ್ಧಿ ನಿಗಮದ ವತಿಯಿಂದ ನಡೆಸಲ್ಪಟ್ಟ ಮಾಜಿ ದೇವದಾಸಿಯರ ಸಮೀಕ್ಷೆಯ ಪಟ್ಟಿಯಲ್ಲಿರುವ ಮಾಜಿ ದೇವದಾಸಿಯರ ಮಕ್ಕಳು ಎಂಬುದರ ಬಗ್ಗೆ ಮಹಿಳಾ ಅಭಿವೃದ್ಧಿ ನಿಗಮದ ಅಧಿಕಾರಿಗಳಿಂದ ಪ್ರಮಾಣ ಪತ್ರ.
11) ಪರಿತ್ಯಕ್ತೆ ಬಗ್ಗೆ ಗ್ರಾಮಪಂಚಾಯ್ತಿಯಿಂದ ಪಡೆದ ಪ್ರಮಾಣ ಪತ್ರ.
12) ಇಲಾಖೆಯ ಸುಧಾರಣಾ ಸಂಸ್ಥೆ / ರಾಜ್ಯ ಮಹಿಳಾ ನಿಲಯಗಳ ನಿವಾಸಿ ಬಗ್ಗೆ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಅಧಿಕಾರಿಗಳಿಂದ ಪಡೆದ ಪ್ರಮಾಣ ಪತ್ರ.
13) ಯೋಜನಾ ನಿರಾಶ್ರಿತರ ಬಗ್ಗೆ ತಹಶೀಲ್ದಾರರಿಂದ ಪಡೆದ ಪ್ರಮಾಣ ಪತ್ರ.

## VI) ಆಯ್ಕೆ ವಿಧಾನ:-

1) ಅರ್ಜಿ ಸಲ್ಲಿಸಲು ನಿಗಧಿ ಪಡಿಸಿರುವ ಕೊನೆಯ ದಿನಾಂಕದ ನಂತರ ಮುಂದಿನ 7 ಕೆಲಸದ ದಿನಗಳೊಳಗೆ ಸಮಿತಿ ಸಭೆ ಸೇರಬೇಕು.
2) ಆಯ್ಕೆ ಸಮಿತಿಯ ಎಲ್ಲಾ ಸದಸ್ಯರು ಹಾಜರಾಗಲು ಸಾಧ್ಯವಾಗದಂತಹ ಅನಿವಾರ್ಯ ಕಾರಣಗಳಿದ್ದಲ್ಲಿ ಕನಿಷ್ಠ 2/3 ರಷ್ಟು ಸದಸ್ಯರು ಕಡ್ಡಾಯವಾಗಿ ಹಾಜರಿರಬೇಕು.
3) ಆನ್-ಲೈನ್ ನಲ್ಲಿ ಹಾಕಿದ್ದ ಎಲ್ಲಾ ಅರ್ಜಿಗಳನ್ನು ಅಂದೇ ಪರಿಶೀಲಿಸುವುದು.

4) ಆನ್-ಲೈನ್ ಅರ್ಜಿಯೊಂದಿಗೆ ಯಾವುದೇ ಅಗತ್ಯ ದಾಖಲೆಯನ್ನು ಸಲ್ಲಿಸದೇ ಇದ್ದಲ್ಲಿ ಅಂತಹ ಅರ್ಜಿಗಳನ್ನು ತಿರಸ್ಕರಿಸುವುದು.

5) ಸ್ವೀಕೃತವಾದ ಅರ್ಜಿಗಳನ್ನು ವಿದ್ಯಾರ್ಹತೆಯಲ್ಲಿ ಪಡೆದ ಅಂಕ ಮತ್ತು ಬೋನಸ್ ಅಂಕಗಳನ್ನು ಒಳಗೊಂಡಂತೆ ಪಡೆದ ಒಟ್ಟು ಅಂಕಗಳಿಗನುಸಾರವಾಗಿ ಕ್ರೋಢೀಕೃತ ಪಟ್ಟಿಯನ್ನು ಆನ್-ಲೈನ್‌ನಲ್ಲಿ ಸಿದ್ಧಪಡಿಸಿ, ಅರ್ಹತೆ ಮತ್ತು ಮೆರಿಟ್‌ಗನುಸಾರವಾಗಿ ಪರಿಶೀಲಿಸಿ ಹೆಚ್ಚು ಅಂಕ ಪಡೆದ ಅಭ್ಯರ್ಥಿಗಳನ್ನು ಆಯ್ಕೆ ಮಾಡಿ ಅಂದೇ ತಾತ್ಕಾಲಿಕ ಆಯ್ಕೆ ಪಟ್ಟಿಯನ್ನು ಸೂಚನಾ ಫಲಕದಲ್ಲಿ ಪ್ರಕಟಿಸುವುದು.

6) ಆಕ್ಷೇಪಣೆಗಳಿದ್ದಲ್ಲಿ ಸಲ್ಲಿಸಲು ಒಂದು ವಾರ(7 ದಿನಗಳು) ಕಾಲಾವಕಾಶ ನೀಡುವುದು ಹಾಗೂ ಕಾಲಾವಕಾಶ ಮುಗಿದ ಮುಂದಿನ ಕೆಲಸದ ದಿನವೇ ಸಮಿತಿಯ ಸಭೆ ಕರೆದು ಆಕ್ಷೇಪಣೆಗಳು ಸ್ವೀಕೃತವಾದಲ್ಲಿ ಅವುಗಳನ್ನು ಕ್ರೋಢೀಕರಿಸಿ ಚರ್ಚಿಸಿ ಕಾರ್ಯಕರ್ತೆ / ಸಹಾಯಕಿಯರ ಅಂತಿಮ ಆಯ್ಕೆಪಟ್ಟಿಯನ್ನು ಅಂದೇ ಸೂಚನಾ ಫಲಕದಲ್ಲಿ ಪ್ರಕಟಿಸುವುದು.

7) ಆಯ್ಕೆ ಪ್ರಕ್ರಿಯೆಯಲ್ಲಿ ಯಾವುದೇ ಸಮಸ್ಯೆ ಕಂಡು ಬಂದಲ್ಲಿ ನೇಮಕಾತಿ ಪ್ರಾಧಿಕಾರವೇ ಚರ್ಚಿಸಿ ನಿಯಮಾನುಸಾರ ಕ್ರಮವಹಿಸುವುದು. ಆಯ್ಕೆ ಸಮಿತಿಯ ನಿರ್ಧಾರವೇ ಅಂತಿಮವಾಗಿರುತ್ತದೆ.

8) ಆಯ್ಕೆ ನಡವಳಿ ಪುಸ್ತಕದಲ್ಲಿ ಆಯ್ಕೆ ಸಮಿತಿಗೆ ಹಾಜರಾದ ಎಲ್ಲಾ ಸದಸ್ಯರ ಹಾಜರಾತಿ ಪಡೆಯುವುದು. ಆಯ್ಕೆ ಪ್ರಕ್ರಿಯೆ ಮುಗಿದ ನಂತರ ನಡವಳಿಗಳನ್ನು ಸವಿವರ(speaking order)ವಾಗಿ, ಕೇಂದ್ರವಾರು ಆಯ್ಕೆಯಾದ ಅಭ್ಯರ್ಥಿಗಳ ಹೆಸರುಗಳನ್ನು ಯಾವ ಮಾನದಂಡಗಳನ್ವಯ ಆಯ್ಕೆ ಮಾಡಲಾಗಿದೆ ಎಂಬ ಷರಾದೊಂದಿಗೆ ನಡವಳಿಯಲ್ಲಿ ದಾಖಲಿಸಿ ಯಾವುದೇ ತಿದ್ದುಪಡಿಗಳಿದ್ದಲ್ಲಿ ಸಕಾರಣದೊಂದಿಗೆ ದೃಢೀಕರಿಸಿ ಹಾಜರಿರುವ ಆಯ್ಕೆ ಸಮಿತಿಯ ಎಲ್ಲಾ ಸದಸ್ಯರ ಸಹಿಯನ್ನು ಕಡ್ಡಾಯವಾಗಿ ಪಡೆಯತಕ್ಕದ್ದು.

9) ಸಂಬಂಧಪಟ್ಟ ಜಿಲ್ಲೆಯ ಉಪನಿರ್ದೇಶಕರು ಅಂತಿಮ ಆಯ್ಕೆ ಪಟ್ಟಿಯಲ್ಲಿರುವ ಅಭ್ಯರ್ಥಿಗಳು ಅಂಗನವಾಡಿ ಕಾರ್ಯಕರ್ತೆ / ಸಹಾಯಕಿಯರಾಗಿ ಕಾರ್ಯನಿರ್ವಹಿಸಲು ನೇಮಕಾತಿ ಆದೇಶಗಳನ್ನು ಹೊರಡಿಸಬೇಕು.

10) ಅಂಗನವಾಡಿ ಕಾರ್ಯಕರ್ತೆ / ಸಹಾಯಕಿಯ ಹುದ್ದೆಯು ಸಂಪೂರ್ಣವಾಗಿ ಗೌರವ ಸೇವೆಯಾಗಿದ್ದು, ಖಾಯಂ ಹುದ್ದೆಯಲ್ಲವೆಂದು ನೇಮಕಾತಿ ಆದೇಶದಲ್ಲಿ ತಿಳಿಸಬೇಕು. ಆಯ್ಕೆಯಾದ ಅಭ್ಯರ್ಥಿಗಳು ವರದಿ ಮಾಡಿಕೊಳ್ಳುವ ಸಮಯದಲ್ಲಿ ಮೂಲ ದಾಖಲಾತಿಗಳು, ವೈದ್ಯಕೀಯ ಪ್ರಮಾಣ ಪತ್ರ (ಫಿಟ್‌ನೆಸ್ ಸರ್ಟಿಫಿಕೆಟ್) ಗಳನ್ನು ಹಾಜರು ಪಡಿಸಿ ಸಂಬಂಧಪಟ್ಟ ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳು ಪರಿಶೀಲಿಸಿ ವರದಿ ಮಾಡಿಸಿಕೊಳ್ಳತಕ್ಕದ್ದು.

## VII) ಅಂಗನವಾಡಿ ಸಹಾಯಕಿಯರನ್ನು ಕಾರ್ಯಕರ್ತೆಯರನ್ನಾಗಿ ಆಯ್ಕೆ ಮಾಡುವ ಬಗ್ಗೆ:

1) ಅಂಗನವಾಡಿ ಕಾರ್ಯಕರ್ತೆ ಹುದ್ದೆ ಖಾಲಿಯಿರುವ / ಹೊಸಕೇಂದ್ರ ಪ್ರಾರಂಭಿಸುತ್ತಿರುವ ಗ್ರಾಮದಲ್ಲಿ ವಾಸಿಸುತ್ತಿರುವ ಸಹಾಯಕಿಯರಿದ್ದು, ಅವರು ಎಸ್.ಎಸ್.ಎಲ್.ಸಿ ಉತ್ತೀರ್ಣರಾಗಿದ್ದು, ಕನಿಷ್ಠ 3 ವರ್ಷ ಸೇವೆ ಸಲ್ಲಿಸಿದ್ದು, 45 ವರ್ಷ ವಯೋಮಿತಿಯೊಳಗಿದ್ದು, ಆ ಅಂಗನವಾಡಿ ಕೇಂದ್ರದಿಂದ 3 ಕಿ.ಮೀ. ವ್ಯಾಪ್ತಿಯೊಳಗೆ ವಾಸಿಸುತ್ತಿದ್ದು, ಕಾರ್ಯಕರ್ತೆ ಹುದ್ದೆಗೆ ಅರ್ಜಿ ಸಲ್ಲಿಸಿದ್ದಲ್ಲಿ ಆ ಅಂಗನವಾಡಿ ಕೇಂದ್ರಕ್ಕೆ ಕಾರ್ಯಕರ್ತೆ ಹುದ್ದೆಗೆ ಬೇರೆ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸುವ ಪ್ರಮೇಯವಿರುವುದಿಲ್ಲ. ಸದರಿ ಸಹಾಯಕಿಯನ್ನೇ ಕಾರ್ಯಕರ್ತೆ ಹುದ್ದೆಗೆ ಆಯ್ಕೆ ಮಾಡತಕ್ಕದ್ದು. ಈ ಬಗ್ಗೆ ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳು ಆಯ್ಕೆ ಸಮಿತಿಯ ಅಧ್ಯಕ್ಷರಿಗೆ ಪ್ರಸ್ತಾವನೆಯನ್ನು ಸಲ್ಲಿಸಿ ಅನುಮೋದನೆ ಪಡೆದು ಆದೇಶ ಹೊರಡಿಸತಕ್ಕದ್ದು.

2) ಒಂದೇ ಗ್ರಾಮದಲ್ಲಿ ಇಬ್ಬರು ಎಸ್.ಎಸ್.ಎಲ್.ಸಿ ಪಾಸಾದ ಅರ್ಹ ಸಹಾಯಕಿಯರಿದ್ದು ಅರ್ಜಿ ಸಲ್ಲಿಸಿದಲ್ಲಿ ಅವರ ಸೇವಾಹಿರಿತನವನ್ನು ಪರಿಗಣಿಸುವುದು. ಸೇವಾಹಿರಿತನವೂ ಒಂದೇ ಆಗಿದ್ದಲ್ಲಿ ವಯೋಹಿರಿಯರನ್ನು ಪರಿಗಣಿಸಬೇಕು.

VIII) ಅನುಕಂಪದ ಆಧಾರದಲ್ಲಿ ಅಂಗನವಾಡಿ ಕಾರ್ಯಕರ್ತೆ/ಸಹಾಯಕಿಯರ ಹುದ್ದೆಗೆ ಗುರುತಿಸುವ ಬಗ್ಗೆ

1. ಸೇವೆಯಲ್ಲಿರುವಾಗಲೇ ಮರಣಹೊಂದುವ ಅಂಗನವಾಡಿ ಕಾರ್ಯಕರ್ತೆ/ಸಹಾಯಕಿಯರ ಅವಿವಾಹಿತ ಮಗಳನ್ನು ಅವರ ತಾಯಿಯು ನಿರ್ವಹಿಸುತ್ತಿದ್ದ ಹುದ್ದೆಗೆ ಅನುಕಂಪದ ಆಧಾರದಲ್ಲಿ ಇತರೆ ಕುಟುಂಬದ ಸದಸ್ಯರಿಂದ ನಿರಾಪೇಕ್ಷಣಾ ಪತ್ರವನ್ನು ನಿಗಧಿತ ಮೊತ್ತದ ಛಾಪಾಕಾಗದದ ಮೇಲೆ ಪಡೆದು ನೇಮಕ ಮಾಡತಕ್ಕದ್ದು.
2. ಅಭ್ಯರ್ಥಿಯ ನಿಗಧಿತ ವಿದ್ಯಾರ್ಹತೆ, ವಯೋಮಿತಿ ಮತ್ತು ಸ್ಥಳೀಯರಾಗಿಬೇಕಾಗಿರುವುದು ಕಡ್ಡಾಯ.

IX) ಶಿಸ್ತು ಪ್ರಾಧಿಕಾರ:-

ಅಂಗನವಾಡಿ ಕಾರ್ಯಕರ್ತೆ / ಸಹಾಯಕಿಯರ ಕಾರ್ಯನಿರ್ವಹಣೆಯಲ್ಲಿ ಯಾವುದೇ ನ್ಯೂನತೆಗಳ ಬಗ್ಗೆ ದೂರುಗಳು ಸ್ವೀಕೃತಗೊಂಡಲ್ಲಿ, ಅವುಗಳನ್ನು ಪರಿಶೀಲಿಸಿ ಇವರನ್ನು ಸೇವೆಯಿಂದ ವಜಾಗೊಳಿಸುವ ಅಧಿಕಾರವು ಜಿಲ್ಲಾಧಿಕಾರಿಗಳು / ಮುಖ್ಯ ಕಾರ್ಯ ನಿರ್ವಹಣಾಧಿಕಾರಿಗಳು, ಜಿಲ್ಲಾ ಪಂಚಾಯತ್ / ಉಪ ನಿರ್ದೇಶಕರು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಇವರಿಗೆ ಇರುತ್ತದೆ.

(ಸಂಧ್ಯಾ ಎಲ್. ನಾಯಕ್)
ಸರ್ಕಾರದ ಅಧೀನ ಕಾರ್ಯದರ್ಶಿ-1,
ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಹಾಗು ವಿಕಲಚೇನತರ
ಮತ್ತು ಹಿರಿಯ ನಾಗರೀಕರ ಸಬಲೀಕರಣ ಇಲಾಖೆ